ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜೆಂಟರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. ... ಶ್ರೀ ... ರಸ್ತೆ,
ಬೆಂಗಳೂರು-2

ಸಂಪುಟ : ೧೫] SADHVI : TUESDAY 1—1—1957 ಮೈಸೂರು : ಮಂಗಳವಾರ ೧—೧—೧೯೫೭ [ಸಂಚಿಕೆ : ೦೫೬

ಮಧ್ಯಪ್ರದೇಶದ ಮುಖ್ಯಮಂತ್ರಿ ರವಿಶಂಕರ ಶುಕ್ಲರ ನಿಧನ

ಕೆಲವು ಗೆಜೆಟೆಡ್ ಅಧಿಕಾರಿಗಳ ಹುಟ್ಟಿದ ತಾರೀಖಿನಲ್ಲಿ ವ್ಯತ್ಯಾಸ

ವಿಧಾನ ಸಭೆಯಲ್ಲಿ ವಿವರಣೆ

ಬೆಂಗಳೂರು ೧

ವಿಧಾನ ಸಭೆಯಲ್ಲಿ ನೆನ್ನೆ ಶ್ರೀ ಬಿ ಪಿ ನಾಗರಾಜಮೂರ್ತಿಯವರ ಪ್ರಶ್ನೆಗೆ ಮುಖ್ಯ ಸಚಿವರು ಉತ್ತರವನ್ನಿತ್ತು, ೧೯೫೦ರಿಂದೀಚೆಗೆ ಹಲವು ಗೆಜೆಟೆಡ್ ಅಧಿಕಾರಿಗಳ ಹುಟ್ಟಿದ ತಾರೀಖುಗಳನ್ನು ಬದಲಾಯಿಸಬೇಕೆಂದು ಸೂಚಿಸಿದರು. ಜನ್ಮ ಪತ್ರಿಕೆ, ಜನನ ಮರಣದ ರಿಜಿಸ್ಟರು ಮುಂತಾದ ಎಲ್ಲಾ ದಾಖಲೆಗಳನ್ನೂ ಪರಿಶೀಲಿಸಿದನಂತರ ಬದಲಾವಣೆ ಮಾಡಲಾಯಿತೆಂದು ಅವರು ಹೇಳಿದರು.

ಇನ್ನೊಂದು ಅನೇಕ ಉಪ ಪ್ರಶ್ನೆಗಳಾದುವು ಶ್ರೀ ... ಚನ್ನಿಗರಾಮಯ್ಯನವರು ಉತ್ತರವಿತ್ತರು ... ಯಾವ ಅಧಿಕಾರಿಗಳು ತಪ್ಪು ತಾರೀಖುಗಳನ್ನು ಕೊಟ್ಟಿರುವರೆಂಬುದನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತಿಳಿಸಲಾಗುವುದಿಲ್ಲವೆಂದು ಸಚಿವರು ಹೇಳಿದರು

ಮಂತ್ರಿಮಂಡಲದ ನೀತಿಗನುಸಾರವಾಗಿ ಪ್ರತಿಯೊಬ್ಬರ ವಿಷಯವನ್ನೂ ಪ್ರತ್ಯೇಕವಾಗಿ ಪರಿಶೀಲಿಸಲಾಗುತ್ತಿರುವುದು, ಹಲವು ಸಂದರ್ಭಗಳಲ್ಲಿ ತೀವ್ರ ಕ್ರಮವನ್ನು ಕೈಗೊಳ್ಳಲಾಗಿದೆ ಹಲವರನ್ನು ಕಡ್ಡಾಯವಾಗಿ ನಿವೃತ್ತಿಗೊಳಿಸಲಾಗಿದೆ. ಉಳಿದ ವಿದ್ಯಮಾನಗಳಲ್ಲಿ ಪುನರ್ಪರಿಶೀಲನೆಯಾಗುವುದು—ಎಂದು ಸಚಿವರು ತಿಳಿಸಿದರು

ಸುಂದರಿ ಕೃಷ್ಣಸ್ವಾಮಿಯವರಿಗೆ ದೆಹಲಿಯಲ್ಲಿ ಹುದ್ದೆ

ಬೆಂಗಳೂರು ಮಹಾರಾಣಿ ಕಾಲೇಜಿನ ಪ್ರಿನ್ಸಿಪಾಲ್ ಶ್ರೀಮತಿ ಸುಂದರಿ ಕೃಷ್ಣಸ್ವಾಮಿಯವರು ದೆಹಲಿ ವಿಶ್ವವಿದ್ಯಾಲಯದ ಮಿರಾಂಡಾ ಹೌಸ್ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಕಗೊಂಡಿದ್ದಾರೆ ಅವರು ದೆಹಲಿಗೆ ಸಧ್ಯದಲ್ಲೇ ತಮ್ಮ ಪತಿ ಮತ್ತು ಪುತ್ರಿಯರೊಡನೆ ತೆರಳಲಿರುವರು

ಬಾವಿಗೆ ಬಿದ್ದು ವಿದ್ಯಾರ್ಥಿಯ ಆತ್ಮಹತ್ಯೆ

ಬಸವನಗುಡಿ ... ರಸ್ತೆಯಲ್ಲಿರುವ ಶ್ಯಾನಭಾಗ ... ಲಿಂಗಯ್ಯನವರ ವಿದ್ಯಾರ್ಥಿ ನಿಲಯದ ಬಾವಿಯಲ್ಲಿ ಮೊನ್ನೆ, ನಿಲಯಕ್ಕೆ ಭೋಜನಕ್ಕಾಗಿ ಬಂದಿದ್ದ ಗಂಗಣ್ಣ ಎಂಬ ೨೦ ವರ್ಷದ ತರುಣ ಬಿದ್ದು ಆತ್ಮಹತ್ಯೆ ಮಾಡಿಕೊಂಡುದಾಗಿ ಗೊತ್ತಾಗಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬–೫ ಸಂಗೀತ ೬–೧೫ ಮತ್ತು ... ಟಿ ಆರ್ ಗೋಪಾಲ್—ದೇವರ ನಾಮ ... ವಾರ್ತೆ ಮಧ್ಯಾಹ್ನ ೧೨ ಸಂಗೀತ ... ರೆಕಾರ್ಡು. ೧ ಟಿ. ಆರ್. ಗೋಪಾಲ—ಗಾಯನ. ೧–೫೦ ಸಂಗೀತ. ೨–೧೫ ಹಂ... ಭೈರವಿ ಸಂಜೆ ೫–೩೦ ಮತ್ತು ೮ ಎಂ. ನಾಗರಾಜಪ್ಪ—ನಾಗಸ್ವರ. ೬–೫ ವಿಶ್ವ ಸಂಗೀತ ೬–೨೦ ರೆಕಾರ್ಡು. ೭–೩೦ ನಾಪ್ಪ ... ನಮ್ಮವರು ೮–೩೦ ರಾಷ್ಟ್ರೀಯ ಕಾರ್ಯ ... ೮–೫೦ ರೆಕಾರ್ಡು ೯–೧೫ ಕೌಸಲ್ಯ ... ಪೇಶ್ವರ್—ಹಿಂದೂಸ್ತಾನಿ ಸಂಗೀತ.

ಉಪಾಧ್ಯಾಯರಿಗೆ ಹೆಚ್ಚು ವೇತನ

ವಿಧಾನ ಸಭೆಯಲ್ಲಿ ವಿದ್ಯಾ ಮಂತ್ರಿಗಳ ಹೇಳಿಕೆ

ಬೆಂಗಳೂರು ೧

ಈ ದಿನದಿಂದ ಸಂಸ್ಥಾನದ ಎಲ್ಲಾ ಉಪಾಧ್ಯಾಯರುಗಳ ಸಂಬಳವನ್ನೂ ಹೆಚ್ಚಿಸಲಾಗುವುದೆಂದು ವಿದ್ಯಾ ಮಂತ್ರಿ ಶ್ರೀ ಎಡಿ. ... ಮಂಜಪ್ಪನವರು ವಿಧಾನ ಸಭೆಯಲ್ಲಿ ನೆನ್ನೆ ತಿಳಿಸಿದರು ಮೈಸೂರು ಉಪಾಧ್ಯಾಯರ ಸಂಘಗಳ ಒತ್ತಾಯ ಕಡಿಮೆಯಾಗಿರುವುದೇ ಈ ವಿಷಯವು ಸರ್ಕಾರಕ್ಕೆ ಗೊತ್ತಿರುವುದಾಗಿ ಅವರು ಹೇಳಿದರು

ರವಿಶಂಕರ ಶುಕ್ಲರವರ ನಿಧನ

ಮಧ್ಯ ಪ್ರದೇಶದ ಮುಖ್ಯ ಮಂತ್ರಿಗಳು

ಮಧ್ಯ ಪ್ರದೇಶದ ಮುಖ್ಯ ಮಂತ್ರಿಗಳೂ, ಹಿರಿಯ ಕಾಂಗ್ರೆಸ್ ನಾಯಕರೂ ಆದ ರವಿಶಂಕರ ಶುಕ್ಲರವರು ನೆನ್ನೆ ಮಧ್ಯಾಹ್ನ ೩ ಗಂಟೆ ಹೊತ್ತಿನಲ್ಲಿ ದೆಹಲಿಯ ಲೋಕಸಭಾ ಸದಸ್ಯ ಪಂಡಿತ ಗೋವಿಂದದಾಸರ ನಿವಾಸದಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಮೊನ್ನೆ ಸಂಜೆವರೆಗೂ ಅವರು ಆರೋಗ್ಯವಾಗಿದ್ದರು ಮಧ್ಯ ರಾತ್ರಿಯಲ್ಲಿ ಇದ್ದಕ್ಕಿದ್ದಂತೆ ಹಠಾತ್ತಾಗಿ ವಿಪರೀತ ಜ್ವರ ಬಂದು, ನ್ಯುಮೋನಿಯಾಕ್ಕೆ ತಿರುಗಿ ಬೆಳಗ್ಗೆ ೧೧ ಗಂಟೆಗೆ ದೇಹಸ್ಥಿತಿಯು ಕೆಟ್ಟಿತು ಅವರು ಮಧ್ಯ ಪ್ರದೇಶ ಕಾಂಗ್ರೆಸ್ ಚುನಾವಣಾ ಸಮಿತಿಯ ಸಭೆಯಲ್ಲಿ ಭಾಗವಹಿಸಲು ದೆಹಲಿಗೆ ಹೋಗಿದ್ದರು ಅವರ ಕಳೇಬರವನ್ನು ಭೋಪಾಲಿಗೆ ಕೊಂಡೊಯ್ಯಲಾಗಿದೆ ರಾಷ್ಟ್ರಾಧ್ಯಕ್ಷರೂ, ಕೇಂದ್ರ ಮಂತ್ರಿಗಳಾದ ಪಂತ್, ಮುರಾರ್ಜಿ ದೇಸಾಯ್, ಜಗಜೀವನರಾಂ ಮುಂತಾದವರೂ, ಮತ್ತಿತರರೂ ಅವರಿಗೆ ಅಂತ್ಯ ಗೌರವವನ್ನು ಸಲ್ಲಿಸಿದರು ಭೋಪಾಲಿನಲ್ಲಿ ಈ ದಿನ ಪ್ರಭುತ್ವ ಮರ್ಯಾದೆಯೊಡನೆ ಅಂತ್ಯ ಸಂಸ್ಕಾರವನ್ನು ನಡೆಸಲಾಗುವುದು ಅವರಿಗೆ ಪತ್ನಿ, ೬ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇರುವರು. ಮೃತರಿಗೆ ೮೦ ವರ್ಷ ವಯಸ್ಸು

ದಕ್ಷಿಣ ಸುಮಾತ್ರಾದಲ್ಲಿ ಯುದ್ಧ ಪರಿಸ್ಥಿತಿಯ ಘೋಷಣೆ

ದಕ್ಷಿಣ ಸುಮಾತ್ರಾದಲ್ಲಿ ಯುದ್ಧ ಮತ್ತು ಮುತ್ತಿಗೆ ಪರಿಸ್ಥಿತಿಯುಂಟಾಗಿರುವುದೆಂದು ಇಂಡೊನೇಷ್ಯಾ ಅಧ್ಯಕ್ಷ ಸುಕರ್ನೋರವರು ಘೋಷಣೆ ಹೊರಡಿಸಿರುವುದಾಗಿ ವರದಿಯಾಗಿದೆ

ಅಣು ಬಾಂಬು ಪರೀಕ್ಷೆ ಪ್ರತಿಭಟಿಸಲು ಉಪವಾಸ

ಅಣು ಮತ್ತು ಜಲಜನಕ ಬಾಂಬುಗಳನ್ನು ಪರೀಕ್ಷಾರ್ಥವಾಗಿ ಸಿಡಿಸುವುದನ್ನು ಪ್ರತಿಭಟಿಸಲು ಸ್ವಿಟ್ಜರ್ಲೆಂಡಿನ ಲಾಸೇನ್ ನಗರದಲ್ಲಿ ಫ್ರೆಂಚ್ ದೇಶಸ್ಥ ಆಲ್ಫ್ರೆಡ್ ನರ್ತೋಸ್ ಎಂಬ ೪೫ ವರ್ಷದ ತತ್ವ ಜ್ಞಾನಿಯೊಬ್ಬರು ಆಮರಣಾಂತ ಉಪವಾಸವನ್ನು ಕೈಗೊಂಡಿದ್ದಾರೆ. ಇದೇ ರೀತಿ ಪಶ್ಚಿಮ ಜರ್ಮನಿಯ ಮ್ಯೂನಿಚ್ ನಗರದಲ್ಲಿ ವಿಲ್ಹೆಂ ವಾನ್ ಆರ್ಟಿಲರ್‌ರವರು ಉಪವಾಸ ಮಾಡುತ್ತಿದ್ದಾರೆ

ಜೂನಿನಲ್ಲಿ ಚೌ ಎನ್ ಲೈ ಮತ್ತು ಐಸೆನ್‌ಹೋವರ್ ಸಮಾಗಮ

ಈ ವರ್ಷದ ಮಧ್ಯ ಭಾಗದಲ್ಲಿ ಬ್ರಿಟನ್ನಿನ ಪ್ರಧಾನಿ ಈಡನ್, ಅಮೆರಿಕದ ಅಧ್ಯಕ್ಷ ಐಸೆನ್‌ಹೋವರ್, ರಷ್ಯದ ಪ್ರಧಾನಿ ಮಾರ್ಷಲ್ ಬುಲ್ಗಾನಿನ್, ಫ್ರೆಂಚ್ ಪ್ರಧಾನಿ ಗೈಮೋಲೆ ಮತ್ತು ಚೀಣದ ಪ್ರಧಾನಿ ಚೌ ಎನ್ ಲೈಯವರ ಭೇಟಿಯಾಗಬಹುದೆಂದು ಲಂಡನ್ನಿನ ವಾರ್ತೆಯೊಂದು ತಿಳಿಸಿದೆ ಪೂರ್ವ ಪಶ್ಚಿಮ ರಾಷ್ಟ್ರಗಳ ನಡುವೆ ತಿಕ್ಕಾಟಕ್ಕೆ ಕಾರಣಗಳನ್ನು ಕಂಡುಹಿಡಿದು ಭಿನ್ನತೆಗಳನ್ನು ನಿವಾರಣೆ ಮಾಡುವುದೇ ಭೇಟಿಯ ಉದ್ದಿಶ್ಯವೆಂದೂ, ಅದಕ್ಕೆ ಮುಂಚಿತವಾಗಿ ಈಡನ್ ಮತ್ತು ಬುಲ್ಗಾನಿನ್ನರ ಸಂಭಾಷಣೆಯು ಮಾಸ್ಕೋವಿನಲ್ಲಿ ಬರುವ ಏಪ್ರಿಲ್ಲಿನಲ್ಲಿ ಆಗುವುದೆಂದೂ ವರದಿಯಾಗಿದೆ ಈಡನ್ನರು ಇನ್ನೆರಡು ತಿಂಗಳಲ್ಲಿ ಅಮೆರಿಕಾ ಅಧ್ಯಕ್ಷರನ್ನು ಸಂದರ್ಶಿಸುವರು ಸೂಯೆಜ್ ಕಾಲುವೆ ಪ್ರಶ್ನೆಯನ್ನು ತೀರಿಸಿ, ವಿಶ್ವದ ನಾನಾ ಕಡೆಗಳ ಸಮಸ್ಯೆಗಳು ಅಗ್ರನಾಯಕರುಗಳ ಭೇಟಿಯಿಂದ ಬಗೆಹರಿಯುವುವೆಂದು ಆಶಿಸಲಾಗಿದೆ

ಮೈಸೂರು ಗವರ್ನರರಿಂದ ವಾಸುದೇವಾಚಾರ್ಯರ ಗುಣಗಾನ

ಮದ್ರಾಸಿನ ಕಲಾಕ್ಷೇತ್ರದಲ್ಲಿ ಶ್ರೀಮತಿ ರುಕ್ಮಿಣಿದೇವಿಯವರು ಸಿದ್ಧಗೊಳಿಸಿರುವ ಸೀತಾ ಸ್ವಯಂವರ ಎಂಬ ನೃತ್ಯ ನಾಟಕ ಪ್ರದರ್ಶನದಲ್ಲಿ ಕಳೆದ ಶುಕ್ರವಾರ ಮೈಸೂರು ಗವರ್ನರ್ ಶ್ರೀ ಜಯಚಾಮರಾಜ ಒಡೆಯರವರು ಅಧ್ಯಕ್ಷತೆ ವಹಿಸಿದ್ದರು ಈ ಪ್ರದರ್ಶನಕ್ಕೆ ಕೃತಿಗಳನ್ನು ಒದಗಿಸಿರುವ ಸಂಗೀತಶಾಸ್ತ್ರ ವಿಶಾರದ ಶ್ರೀ ಕೆ ವಾಸುದೇವಾಚಾರ್ಯರನ್ನು ಗವರ್ನರರು ಅಭಿನಂದಿಸಿ, ಅವರು ಸಂಗೀತ ಮತ್ತು ಸಾಹಿತ್ಯಗಳಲ್ಲಿ ವಿಶೇಷ ಪಾಂಡಿತ್ಯ ಹೊಂದಿರುವರಲ್ಲದೆ, ಕಲಾ ಪೂರ್ಣ ಕಾವ್ಯಗಳನ್ನೂ ಸಹ ರಚಿಸಬಲ್ಲರೆಂದೂ, ಅವರಲ್ಲಿ ಹೊಸಹೊಸ ಕೃತಿಗಳನ್ನು ಸೃಷ್ಟಿಸುವ ಅಸಾಧಾರಣ ಶಕ್ತಿಯು ಇರುವುದೆಂದೂ ಸೂಚಿಸಿದರು ಶ್ರೀಮತಿ ರುಕ್ಮಿಣಿದೇವಿಯವರ ಕಾರ್ಯ ಚಟುವಟಿಕೆಗಳನ್ನೂ ಗವರ್ನರರು ಪ್ರಶಂಸಿಸಿದರು ಡಾ॥ ಸಿ ಪಿ ರಾಮಸ್ವಾಮಿ ಅಯ್ಯರ್‌ರವರು ಸ್ವಾಗತ ಭಾಷಣ ಮಾಡಿದರು

ಕನ್ಯಕಾಪರಮೇಶ್ವರಿ ಸಹಕಾರ ಸಂಘದ ಅಧಿಕಾರ ವರ್ಗ

ನಗರದ ಕನ್ಯಕಾಪರಮೇಶ್ವರಿ ಸೊಸೈಟಿಯ ಶೇರುದಾರುಗಳ ಸಭೆಯು ಮೊನ್ನೆ ಸೇರಿ ನೂತನ ಅಧಿಕಾರವರ್ಗದ ಚುನಾವಣೆ ನಡೆಸಿತು ಶ್ರೀ ಪಿ ಗೋಪಾಲಕೃಷ್ಣ ಶೆಟ್ಟರು ಅಧ್ಯಕ್ಷರಾಗಿಯೂ, ಶ್ರೀ ಕೆ. ಆರ್. ತಿಮ್ಮರಾಯಶೆಟ್ಟರು ಉಪಾಧ್ಯಕ್ಷರಾಗಿಯೂ, ಶ್ರೀ ಜೆ. ಅಶ್ವತ್ಥನಾರಾಯಣಶೆಟ್ಟರು ಖಜಾಂಚಿ ಮತ್ತು ಶ್ರೀ ಚೆನ್ನಸ್ವಾಮಿ ಶೆಟ್ಟರು ಲೀಗಲ್ ಅಡ್ವೈಸರ್ ಆಗಿಯೂ ಆರಿಸಲ್ಪಟ್ಟರು

○ ಅಮೆರಿಕಾ ವಿಮಾನ ದಳದ ಒಂದು ವಿಮಾನವು ಸಾವಿರ ಅಡಿಗಳಿಗಿಂತಲೂ ಹೆಚ್ಚು ಎತ್ತರದಲ್ಲಿ ನೆನ್ನೆ ಮುಂಜಾನೆ ಮುರಿದುಬಿದ್ದು ೧೧ ಮಂದಿ ಸೈನಿಕರು ಮೃತಪಟ್ಟರು ೨೬ ಜನರು ಗಾಯಗೊಂಡಿದ್ದಾರೆ.

ನೌಕರರ ವೇತನ ಹೆಚ್ಚಿಸುವ ಪ್ರಶ್ನೆ

ಮುಖ್ಯ ಮಂತ್ರಿ ನಿಜಲಿಂಗಪ್ಪನವರ ಹೇಳಿಕೆ

ಬೆಂಗಳೂರು ೧

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನೆನ್ನೆ ಪತ್ರಿಕಾ ಪ್ರತಿನಿಧಿಗಳೊಡನೆ ಸರ್ಕಾರಿ ನೌಕರರ ಸಂಬಳದ ವಿಚಾರವನ್ನು ಪ್ರಸ್ತಾಪಿಸಿ, ೧೦೦ ರೂ ಗಿಂತ ಕಡಿಮೆ ಸಂಬಳ ಬರುವವರಿಗೆ ಸರ್ಕಾರದವರು ಹೊರಡಿಸಲಿರುವ ಹೊಸ ಆಜ್ಞೆಯ ಪರಿಣಾಮವಾಗಿ ಹೆಚ್ಚಿನ ಸೌಲಭ್ಯವು ದೊರೆಯುವುದೆಂದೂ, ಸರ್ಕಾರದವರು ವಹಿಸಲಿರುವ ೮ ಕೋಟಿ ರೂ ಹೆಚ್ಚಿನ ವೆಚ್ಚದಲ್ಲಿ ಕೆಳಗಿನ ೯೦ ಜನರಿಗೆ ಉಪಯೋಗವಾಗುವುದೆಂದೂ ಹೇಳಿದರು ಕನಿಷ್ಠವಾಗಿ ಒಬ್ಬನಿಗೆ ಒಟ್ಟು ೫೦ ರೂ ವರೆಗೆ ವೇತನ ದೊರೆಯುವುದೆಂದೂ ಐ. ಎ ಎಸ್ ಅಧಿಕಾರಿಗಳನ್ನು ಬಿಟ್ಟು ಮಿಕ್ಕವರ ಪರಮಾವಧಿ ಸಂಬಳವು ೧,೫೦೦ ರೂ ಆಗಬಹುದಾಗಿಯೂ ಗೊತ್ತಾಗಿದೆ ಹೊಸ ಸ್ಕೇಲುಗಳು ಇಂದಿನಿಂದ ಜಾರಿಗೆ ಬರಲಿವೆ ಮಂತ್ರಿಮಂಡಲವು ಈ ದಿಕ್ಕಿನಲ್ಲಿ ಅನೇಕ ನಿರ್ಧಾರ ಕೈಗೊಳ್ಳಲಿದೆ.

ಅಂಚೆ ಮತ್ತು ತಂತಿ ನೌಕರರ ಮುಷ್ಕರ ಸಧ್ಯಕ್ಕಿಲ್ಲ

ಸಧ್ಯದಲ್ಲೇ ಮಹಾ ಚುನಾವಣೆಗಳು ನಡೆಯಲಿರುವ ಕಾರಣಕ್ಕಾಗಿ ತಮ್ಮ ನೇರ ಕಾರ್ಯಾಚರಣೆಯನ್ನು ಈಗಲೇ ಕೈಗೊಳ್ಳಬಾರದೆಂದು ಹೈದರಾಬಾದಿನಲ್ಲಿ ಸೇರಿದ್ದ ಅಂಚೆ ಮತ್ತು ತಂತಿ ಇಲಾಖಾ ನೌಕರರ ರಾಷ್ಟ್ರೀಯ ಸಮ್ಮೇಳನದ ಮಂಡಲಿಯು ನೆನ್ನೆ ನಿರ್ಧರಿಸಿತು.

ಇಂದಿನಿಂದ ವಿಶ್ವವಿದ್ಯಾಲಯಕ್ಕೆ ಸ್ವಯಂ ಆಡಳಿತ

ಮೈಸೂರು ೧

ಮೈಸೂರು ವಿಶ್ವವಿದ್ಯಾಲಯವು ಇಂದಿನಿಂದ ಸ್ವಯಂ ಆಡಳಿತವನ್ನು ಹೊಂದಿರುತ್ತದೆ ಈ ಸಂಬಂಧವಾಗಿ ಕಳೆದ ಶಾಸನಸಭಾಧಿವೇಶನದಲ್ಲಿ ಮಸೂದೆಯೊಂದು ಅಂಗೀಕೃತವಾಗಿತ್ತು. ಹೊಸ ಏರ್ಪಾಡಿನ ಪ್ರಕಾರ ವಿಶ್ವವಿದ್ಯಾಲಯದ ಛಾನ್ಸಲರ್ ಸಿಂಡಿಕೇಟಿಗೆ ಮಾರ್ಗದರ್ಶಿಯಾಗುವರು.

ಸಾಯಿಬಾಬಾ ವಿಗ್ರಹದ ಪ್ರತಿಷ್ಠೆ

ನಗರದ ತ್ಯಾಗರಾಜಾ ರಸ್ತೆಯಲ್ಲಿ ನೂತನವಾಗಿ ನಿರ್ಮಿತವಾಗಿರುವ ಸಾಯಿಬಾಬಾ ಮಂದಿರದಲ್ಲಿ ಬರುವ ಮಾರ್ಚಿ ೪ ರಂದು ಶ್ರೀ ಸಾಯಿಬಾಬಾರವರ ವಿಗ್ರಹದ ಪ್ರತಿಷ್ಠಾಪನೆಯನ್ನು ಮಾಡಲಾಗುವುದು ಅದರ ಅಂಗವಾಗಿ ಏಳು ದಿನಗಳ ಕಾರ್ಯಕ್ರಮವನ್ನು ಹಾಕಲಾಗಿದೆ ಮೊದಲನೇ ದಿನದ ಕಾರ್ಯಕ್ರಮದಲ್ಲಿ ಗವರ್ನರರು ಭಾಗವಹಿಸುವರು ಈ ಉತ್ಸವವನ್ನು ನೆರವೇರಿಸಲು ಶ್ರೀ ಎಸ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ ಮಂದಿರದ ಆಡಳಿತ ಮಂಡಲಿಯ ಅಧ್ಯಕ್ಷ ಡಾ॥ ಎಂ ಎಲ್. ಮರಿಸ್ವಾಮಿ ಶ್ರೀ ಇ ಪಿ ವೆಂಕಟಪ್ಪ ಮುಂತಾದ ಪ್ರಮುಖರುಗಳು ಪತ್ರಿಕಾ ಪ್ರತಿನಿಧಿಗಳನ್ನು ಬರಮಾಡಿಕೊಂಡು ಅವರಿಗೆ ಕಟ್ಟಡವನ್ನು ತೋರಿಸಿದುದಲ್ಲದೆ ಈ ಮೂಲಕ ಸಾರ್ವಜನಿಕರ ಸಹಕಾರವನ್ನು ಕೋರಿದರು

ಸಂಸ್ಥಾನದ ಆಯವ್ಯಯ ಅಂದಾಜಿನ ಅಂಗೀಕಾರ

ಟೀಕೆಗಳಿಗೆ ಹಣಕಾಸಿನ ಸಚಿವರ ಉತ್ತರ

ಬೆಂಗಳೂರು ೩೧

ಕಳೆದ ನವೆಂಬರ್ ೧ ರಿಂದ ೫ನೆ ತಿಂಗಳಿಗಾ ೧೫ ಕೋಟಿ ರೂ ಗಳ ವೆಚ್ಚಕ್ಕೆ ಸಂಬಂಧಿಸಿದ ಅಪ್ರೋಪ್ರಿಯೇಷನ್ ಮಸೂದೆ ... ವಿಧಾನ ಸಭೆಯು ನೆನ್ನೆ ಅಂಗೀಕರಿಸಿತು

ಸದಸ್ಯರ ಟೀಕೆಗಳಿಗೆ ಹಣಕಾಸಿನ ಮಂತ್ರಿ ಟಿ ಮರಿಯಪ್ಪನವರು ಉತ್ತರಿಸುತ್ತಾ, ಸಂಸ್ಥಾನದ ಹಣಕಾಸಿನ ಪರಿಸ್ಥಿತಿ ಬಗ್ಗೆ ಆತಂಕಪಡಬೇಕಾದ ಅಗತ್ಯವಿಲ್ಲವೆಂದೂ, ಅದು ಉತ್ತಮವಾಗಿರುವುದೆಂದೂ ತಿಳಿಸಿದರು

ಮಾಧವರಾವ್ ಸಮಿತಿಯ ಶಿಫಾರಸಿನ ಪ್ರಕಾರ ಸರ್ಕಾರದ ವೆಚ್ಚವನ್ನು ಕಡಿಮೆ ಮಾಡಿಕೊಳ್ಳಲು ಆಲೋಚಿಸಲಾಗುತ್ತಿದೆ, ಹೊಸ ಸಂಸ್ಥಾನದ ಉದ್ಭವದಿಂದ ಹೊಸ ಆಡಳಿತ ಮತ್ತು ಮಾನವೀಯ ಸಮಸ್ಯೆಗಳು ಹುಟ್ಟಿರುವುವು, ಆ ಸ್ಥಿತಿ ಸಂಬಳದ ಮಟ್ಟದ ಪ್ರಶ್ನೆಯೂ ಸೇರಿರುವುದು, ಎಲ್ಲರಿಗೂ ಒಂದೇ ಸಮನಾದ ಸರ್ವಿಸ್ ನಿಬಂಧನೆಗಳನ್ನು ರಚಿಸಲಾಗುತ್ತಿದೆ, ಒಂದೇ ಸಮನಾದ ತೆರಿಗೆ ವಿಧಾನವನ್ನು ಸಿದ್ಧಗೊಳಿಸುವುದಕ್ಕಾಗಿ ಹಣಕಾಸಿನ ಇಲಾಖಾ ಅಧಿಕಾರಿಗಳ ಸಮಿತಿಯೊಂದನ್ನು ರಚಿಸಲಾಗಿರುವುದು ದ್ವಿತೀಯ ಯೋಜನೆಯ ಪುನಃಪರಿಶೀಲನೆಗೆ ಅವಕಾಶವಿದೆ ಎಂದು ಅವರು ತಿಳಿಸಿದರು

ಚರ್ಚೆಯಲ್ಲಿ ವಿರೋಧ ಪಕ್ಷದ ನಾಯಕ ಶ್ರೀ ಕೆ ಎಂ ಇಮಾಮರು ಮಾತನಾಡಿ, ಕಾಂಗ್ರೆಸ್ ಸರ್ಕಾರಗಳು ಮಾಡುತ್ತಿರುವ ತಪ್ಪುಗಳನ್ನು ತಿದ್ದಿಕೊಳ್ಳುತ್ತಿಲ್ಲವೆಂದು ಆಕ್ಷೇಪಿಸಿದರು ಇನ್ನು ಮುಂದೆ ಕೇಂದ್ರದ ಗ್ರಾಂಟುಗಳ ಬಗ್ಗೆ ಭರವಸೆಯಿಡಬಾರದೆಂದೂ, ಹಣಕಾಸಿನ ಸ್ಥಿತಿಯನ್ನು ಸರ್ಕಾರದವರು ಸರಿಪಡಿಸಿಕೊಳ್ಳಬೇಕೆಂದೂ ಸೂಚಿಸಿದರು ಹಳೇ ಮೈಸೂರಿನ ದ್ವಿತೀಯ ಯೋಜನೆಯು ೮೦ ಕೋಟಿ ಮತ್ತು ನೂತನ ಸಂಸ್ಥಾನದ್ದು ೧೫೦ ಕೋಟಿ ರೂ ಆಗುವುದೆಂದೂ, ಕೇಂದ್ರ ಸರ್ಕಾರದವರು ಗ್ರಾಂಟು ಕೊಡದಿದ್ದರೆ ಹಳೇ ಮೈಸೂರಿನ ಅಭಿವೃದ್ಧಿ ಕಾರ್ಯಗಳಿಗೆ ೧ ಕೋಟಿ ರೂ ಮಾತ್ರ ಇದ್ದು ಉಳಿದ ಹಣವನ್ನು ಸಾಲ ಅಥವಾ ತೆರಿಗೆಗಳಿಂದ ಎತ್ತಬೇಕಾದ ಸ್ಥಿತಿಯಿರುವುದೆಂದೂ ಸೂಚಿಸಿದರು

ಶ್ರೀ ಶ್ರೀನಿವಾಸಯ್ಯಂಗಾರ್ಯರು ಮಾತನಾಡಿ ಸರ್ಕಾರದವರು ಬಾಕಿಯಿರುವ ತೆರಿಗೆಗಳನ್ನು ಪ್ರಭಾವಗಳಿಗೆ ಅಂಜದೆ ವಸೂಲು ಮಾಡಿಕೊಳ್ಳುವುದು ಅಗತ್ಯವೆಂದು ಪ್ರತಿಪಾದಿಸಿದರು

ಶ್ರೀ ಎಸ್ ಆರ್. ಕಂಠಪ್ಪಶೆಟ್ಟರು ಗ್ರಾನೈಟ್ ... ಯೋಜನೆಯನ್ನು ರದ್ದುಗೊಳಿಸಬೇಕೆಂದು ಸಲಹೆ ಮಾಡಿ, ಸಂಸ್ಥಾನದಲ್ಲಿ ವೆಟರಿನರಿ ಕಾಲೇಜನ್ನು ತೆರೆಯಬೇಕೆಂದು ಸೂಚಿಸಿದರು

ಗೋವಾದಲ್ಲಿ ದುರಾಡಳಿತ ಪರಿಶೀಲನೆಗಾಗಿ ವಿಶ್ವ ಸಂಸ್ಥೆಗೆ ಕರೆ

ಗೋವಾದಲ್ಲಿ ಪೋರ್ಚುಗೀಸರು ನಡೆಸುತ್ತಿರುವ ಆಡಳಿತದ ಪರಿಶೀಲನೆಗಾಗಿ ಮೂರು ಸದಸ್ಯರುಳ್ಳ ಸಮಿತಿಯೊಂದನ್ನು ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹ್ಯಾಮರ್‌ಶೀಲ್ಡರು ಕಳುಹಿಸಬೇಕೆಂದು ಗೋವಾ ರಾಷ್ಟ್ರೀಯ ಸಂಘದ ಅಧ್ಯಕ್ಷ ಟಿ ಎಂ ಡಿಸೌಜಾರವರು ಮನವಿ ಮಾಡಿಕೊಂಡಿರುತ್ತಾರೆ ಗೋವಾ ಪ್ರತಿಗಳನ್ನು ಅದರಲ್ಲಿ ಮುಖ್ಯವಾಗಿ ರಾಷ್ಟ್ರೀಯರನ್ನು ಸಮಿತಿಯವರು ಭೇಟಿ ಮಾಡಿ ಅಲ್ಲಿನ ಸ್ಥಿತಿಗತಿಗಳನ್ನು ತಿಳಿದುಕೊಳ್ಳಬೇಕೆಂದು ಅವರು ಕೋರಿರುವರು ಗೋವಾ ಜನರು ೪೫೦ ವರ್ಷಗಳ ಪೋರ್ಚುಗೀಸರ ದಾಸ್ಯದ ಆಡಳಿತದಿಂದ ವಿಮುಕ್ತರಾಗಲು ಮತ್ತು ಸ್ವತಂತ್ರವಾದ ಭಾರತದಲ್ಲಿ ಸೇರಲು ಕಾತರರಾಗಿರುವರೆಂದು ಅವರು ಹೇಳಿರುವರು

ಹರಿಕಥೆ

ಚಾಮುಂಡಿಪುರಂ ಅರಳೀಕಟ್ಟೆ ರಾಮಮಂದಿರ (ಕುರುಬರ ಸಂಘ) ದಲ್ಲಿ ವಿದ್ವಾನ್ ಹೆಚ್ ಟಿ ರಾಮಣ್ಣನವರಿಂದ ನಾಳೆಯಿಂದ ಪ್ರತಿ ದಿನ ಸಾಯಂಕಾಲ ೭ ಗಂಟೆಗೆ "ಶ್ರೀನಿವಾಸ ಕಲ್ಯಾಣ" ಎಂಬ ಹರಿಕಥೆಯನ್ನು ಏರ್ಪಡಿಸಲಾಗಿದೆ ಸರ್ವರೂ ಭಾಗಿಗಳಾಗಬೇಕಾಗಿ ಕೋರಿದೆ.

ವಿಶ್ವ ಸಂಸ್ಥೆ ಸಭೆಯಲ್ಲಿ ನೆಹರೂರವರ ಭಾಷಣ

ನ್ಯೂಯಾರ್ಕ್ ನಗರದಲ್ಲಿರುವ ವಿಶ್ವ ಸಂಸ್ಥೆಗೆ ಅವರ ಭೇಟಿ ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ವೇದಿಕೆಯ ಮೇಲಿರುವರು

ಅಖಿಲ ಭಾರತ ಇಂಗ್ಲಿಷ್ ಉಪಾಧ್ಯಾಯರ ಸಮ್ಮೇಳನ

ಧಾರವಾಡದಲ್ಲಿ ಮೂರು ದಿನಗಳಿಂದ ನಡೆದ ಅಖಿಲ ಭಾರತ ಇಂಗ್ಲಿಷ್ ಉಪಾಧ್ಯಾಯರ ಸಮ್ಮೇಳನವು ನೆನ್ನೆ ಮುಕ್ತಾಯವಾಯಿತು ಡಾ| ಪಿ ಎಫ್ ದಸ್ತೂರ್‌ರವರು ಅಧ್ಯಕ್ಷತೆ ವಹಿಸಿದ್ದರು ಮಾಧ್ಯಮಿಕ ಮತ್ತು ವಿಶ್ವವಿದ್ಯಾಲಯಗಳ ಶಿಕ್ಷಣ ಮಟ್ಟದಲ್ಲಿ ಇಂಗ್ಲಿಷ್ ಭಾಷೆಯು ಕಡ್ಡಾಯವಾಗಿರಬೇಕೆಂದೂ, ಮಾಧ್ಯಮಿಕ ಶಾಲೆಯಲ್ಲಿ ಅದನ್ನು ಕಡೆಯ ಪಕ್ಷ ೬ ವರ್ಷಗಳ ವರೆಗಾದರೂ ಹೇಳಿಕೊಡಬೇಕೆಂದೂ ಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು ೧ ವರ್ಷದ ಪ್ರಿ ಯೂನಿವರ್ಸಿಟಿ ತರಗತಿ ಮತ್ತು ಮೂರು ವರ್ಷಗಳ ಪದವಿ ತರಗತಿಗಳಿರಬೇಕೆಂದು ಸೂಚಿಸಲಾಯಿತು

ಕೇಡಿಗಳ ಬಂಧನ

ಕೊಳ್ಳೇಗಾಲದ ಸಿದ್ದಪ್ಪನ ಮಗ ಸ್ವಾಮಿ ಎಂಬ ಹುಡುಗನು ಕಳೆದ ಶನಿವಾರ ಹಾರ್ಡಿಂಜ್ ಸರ್ಕಲ್ ಬಳಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದಾಗ ಲಕ್ಷ್ಮೀಪುರದ ಪೋಲೀಸು ಸಬ್ ಇನ್ಸ್‌ಪೆಕ್ಟರು ಅವನನ್ನು ಬಂಧಿಸಿದರು ಅವನ ಬಳಿ ದೊರೆತ ಮೂರು ಟವಲುಗಳು ಕೃಷ್ಣಮೂರ್ತಿಪುರದ ಆಸ್ಪತ್ರೆಗೆ ಸೇರಿದುವೆಂದು ಗುರುತಿಸಲಾಗಿದೆ ಚನ್ನೇಗೌಡನಕೊಪ್ಪಲಿನವನೆಂದು ಹೇಳಲಾದ ೪೦ ವರ್ಷದ ಮಾಗನೊಬ್ಬನು ಕೃಷ್ಣವಿಲಾಸ್ ಗೋಡೆ ಹಾರಿ ಎರಡು ಕಬ್ಬಿಣದ ಸಲಾಕೆಗಳನ್ನು ಅಪಹರಿಸುತ್ತಿದ್ದಾಗ ವಾಚ್ ಅಂಡ್ ವಾರ್ಡ್‌ನವರು ಅವನನ್ನು ಹಿಡಿದು ಪೋಲೀಸರಿಗೆ ಒಪ್ಪಿಸಿದರು

ಕ್ಯಾಲೆಂಡರ್ ಸ್ವೀಕಾರ

ನಗರದ ಕಾಗದ ಮತ್ತು ಸ್ಟೇಷನರಿ ವ್ಯಾಪಾರಿಗಳಾದ ಶ್ರೀ ಟಿ ಆರ್ ಕೃಷ್ಣಸ್ವಾಮಿಯವರು ಕಳುಹಿಸಿರುವ ನೂತನ ವರ್ಷದ ಕ್ಯಾಲೆಂಡರನ್ನು ಆದರದಿಂದ ಸ್ವೀಕರಿಸಿದ್ದೇವೆ

ಕೆ. ಯತಿರಾಜುಲು ನಾಯ್ಡುರವರ ನಿಧನ

ವಾಣಿವಿಲಾಸ ಮೊಹಲ್ಲಾದಲ್ಲಿದ್ದ, ಅರಮನೆ ಕೋಟೆಗಳ ನಿವೃತ್ತ ಸೂಪರಿಂಟೆಂಡೆಂಟರಾದ ಶ್ರೀ ಕೆ ಯತಿರಾಜುಲು ನಾಯ್ಡುರವರು ಬಹು ದಿನಗಳಿಂದಲೂ ರೋಗ ಪೀಡಿತರಾಗಿದ್ದು, ಕಳೆದ ಶುಕ್ರವಾರ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಅವರಿಗೆ ೬೩ ವರ್ಷ ವಯಸ್ಸಾಗಿತ್ತು ಮೃತರ ಆತ್ಮಕ್ಕೆ ಶಾಂತಿ ಕೋರಿ, ಬಂಧುಮಿತ್ರರಿಗೆ ಅನುತಾಪವನ್ನು ಸೂಚಿಸುತ್ತೇವೆ

1957　　1957

ಶುಭಾಶಯ!

ಮೂರ್ತಿ ಮೋಟರ್ಸ್

ಸೂರತಿ ರಸ್ತೆ　　ಮೈಸೂರು

Edited, Printed and Published by A R Nagarajan at Sadhvi Press, D Subbiah Road, Mysore

ಚೀಣಾ ಕಮ್ಯೂನಿಸ್ಟರಿಂದ ಟಿಟೋರವರ ಖಂಡನೆ

ಚೀಣದ ಕಮ್ಯೂನಿಸ್ಟ್ ಪಕ್ಷವು ಹೇಳಿಕೆಯೊಂದನ್ನಿತ್ತು, ಮಾರ್ಷಲ್ ಟಿಟೋರವರ ವರ್ತನೆಯನ್ನು ಖಂಡಿಸಿ, ರಷ್ಯದ ಕಮ್ಯೂನಿಸ್ಟ್ ನಾಯಕತ್ವವನ್ನು ಎತ್ತಿಹಿಡಿದಿದೆ ಟಿಟೋರವರ ವರ್ತನೆಯಿಂದ ಕಮ್ಯೂನಿಸ್ಟರ ಚಳುವಳಿಯಲ್ಲಿ ಒಡಕುಂಟಾಗುವುದೆಂದು ಚೀಣಾ ಪಕ್ಷವು ಅಭಿಪ್ರಾಯಪಟ್ಟಿರುತ್ತದೆ

ಕೈ ಕಸಬು ಪ್ರಚಾರಣೆ ಮುಂದಕ್ಕೆ

ಇದೇ ತಿಂಗಳು ೫ನೇ ತಾರೀಕು ಆರಂಭವಾಗಬೇಕಾಗಿದ್ದ ಕೈ ಕಸಬಿನ ಪ್ರಚಾರಣೆ ಮತ್ತು ಪ್ರದರ್ಶನವು ೧೫ ನೇ ತಾರೀಕಿನಿಂದ ೨೦ರವರೆಗೆ ವಸ್ತು ಪ್ರದರ್ಶನದ ಕಟ್ಟಡದಲ್ಲಿ ನಡೆಯುವುದು

ಧನುರ್ಮಾಸ ಪೂಜೆ

ಕೃಷ್ಣರಾಜವನದಲ್ಲಿರುವ ಆತ್ಮಾರಾಮ ಮಂದಿರದಲ್ಲಿ ಧನುರ್ಮಾಸ ಪೂಜಾ ಮಹೋತ್ಸವವು ಕಳೆದ ತಿಂಗಳು ೧೭ರಿಂದ ಆರಂಭವಾಗಿ, ಇದೇ ೧೪ ನೇ ತಾರೀಕು ಬೆಳಿಗ್ಗೆ ಮಹಾ ಮಂಗಳಾರತಿಯೊಡನೆ ಮುಕ್ತಾಯವಾಗಲಿದೆ ಭಕ್ತರು ಈ ಸೇವೆಗೆ ನೆರವಾಗಿ ಭಾಗವಹಿಸುವಂತೆ ಪ್ರಾರ್ಥಿಸಲಾಗಿದೆ

SRI GAYATHRI
TALKIES
Convey their New Year Greetings to all their Patrons and Present
M G M's Thrilling Picture
RANSOM
From to-day as New Year's Special Attraction
Starring - Glenn Ford and Dona Reed

ಮುಕ್ಕೋಜಿರಾವ್ ಸಿಂಧ್ಯರವರ ನಿ...

ಡಿ ಐ ಜಿ ಪದವಿಯಿಂದ ಶ್ರೀ ಮುಕ್ಕೋ... ವ್ ಸಿಂಧ್ಯರವರು ಕಳೆದ ೨೯ ನೇ ತಾರೀ... ನಿವೃತ್ತರಾದರು ಅವರು ಅನೇಕ ವರ್ಷ... ಮೈಸೂರಿನಲ್ಲಿದ್ದರು

Hello!
Wish you a happy New Year
H S VENKATA RAO
BA, BL
(Astro-Palmist)

ಗೃಹಕೃತ್ಯದ ನೋಟೀಸ್

ಹೆಗ್ಗಡದೇವನಕೋಟೆ ತಾಲ್ಲೂಕು ... ರದ ಹೋಬಳಿ ಕೋಳಗಾಲ ಗ್ರಾಮದ ... ಮಾದಪ್ಪನವರ ಮಗ ಪುಟ್ಟಯ್ಯನು ... ಲಕ ಸಮಸ್ತ ಜನಗಳಿಗೂ ತಿಳಿಯಪಡಿ... ನೆಂದರೆ —

ಈ ಕೆಳಗೆ ಷೆಡ್ಯೂಲಿನಲ್ಲಿ ಕಂಡ ಸ್ವತ್ತು... ಗಳು ನಮ್ಮಗಳ ಅವಿಭಕ್ತ ಕುಟುಂಬದ ಸ್ವ... ಸ್ವತ್ತುಗಳಾಗಿರುತ್ತ ಆದಾಗ್ಯೂ ಸಹ ನನ್ನ... ನವರಾದ ಮೈಸೂರು ಸಿಟಿ ಕೃಷ್ಣರಾಜ... ಲ್ಲಾ ಮಾಧವಾಚಾರ್ ರಸ್ತೆಯಲ್ಲಿ ... 2029ನೇ ನಂಬರು ಮನೆಯಲ್ಲಿರುವ ಬಸ... ಪ್ಪ ಎಂಬುವರು ನನಗೂ, ನನ್ನ ಮಕ್ಕಳಿಗೂ ಮೋಸ ಮಾಡಬೇಕೆಂಬ ಇರಾದೆಯಿಂದ ನ... ನುಮತಿ ಇಲ್ಲದೆ ಷೆಡ್ಯೂಲು ಸ್ವತ್ತುಗಳನ್ನು ... ಧಾರೆ ಮಾಡುತ್ತಾರೆಂದು ತಿಳಿಯಬಂದಿ... ಆದ ಪ್ರಯುಕ್ತ ನನ್ನ ಇರಾದೆ ಇಲ್ಲದೆ ಸ್ವ... ತ್ತುಗಳನ್ನು ಕ್ರಯ, ಆಧಾರ, ಭೋಗ್ಯ ... ಮಾಡಿಕೊಂಡಲ್ಲಿ ಅದು ಊರ್ಜಿತವಾಗ...

ಷೆಡ್ಯೂಲ್ — ಹೆಗ್ಗಡದೇವನಕೋಟೆ ತಾ... ಕು ಹಂಪಾಪುರದ ಹೋಬಳಿ ಕೋಳಗಾ... ದಾಖ್ಲೆ ಚಟ್ಟಹಳ್ಳಿ ಗ್ರಾಮಕ್ಕೆ ಸೇರಿದ ...

ಸರ್ವೆ ನಂಬರು	ವಿಸ್ತೀರ್ಣ	...
14/1	ಎಕರೆ 4 ಗುಂಟೆ 1	3...
29	6–17	4...
30/1	2–29	2...
32/2	4–37	4...

ಡಿಟೋ ತಾಲ್ಲೂಕು ಹೋಬಳಿಯಿಂದ ಗ್ರಾ... ಸೇರಿದ ಸರಿ ಸರ್ವೆ ನಂಬರು 170 ವಿಸ್ತೀ... ಎಕರೆ 1 ಗುಂಟೆ 35, ಆಕಾರ 11 0 0

ಕೋಳಗಾಲದ ಗ್ರಾಮದಲ್ಲಿರುವ ... ಹೆಂಚಿನ ಮನೆಗಳು ಮತ್ತು ಮೈಸೂರು ... ಕೃಷ್ಣರಾಜ ಮೊಹಲ್ಲಾ ಮಾಧವಾಚಾರ್ ... ಯಲ್ಲಿರುವ ಪೂರ್ವಕ್ಕೆ ಚಿಲ್ಲರೆ ಅಂಗಡಿ ... ನವರ ಮನೆ, ಪಶ್ಚಿಮಕ್ಕೆ ಚಿಕ್ಕರಾಮ... ಮನೆ, ಉತ್ತರಕ್ಕೆ ದಾವೂದ್ ಸಾಬರು ... ಯವರ ಮನೆ, ದಕ್ಷಿಣಕ್ಕೆ ಮಾಧವಾ... ರಸ್ತೆ — ಈ ಮಧ್ಯೆ ಇರುವ ಮುನಿಸಿಪಲ್ ... ನಂಬರು 2029 ಉಳ್ಳ ಆರೆ ಮಹಡಿ ... ಹೆಂಚಿನ ಮನೆ

ಮೈಸೂರು　　(ರುಜು) ಪುಟ್ಟ...
26-9-56　　ಕೋಳಗಾ...

ಕೃಷ್ಣಾ ಮಿಲ್ ರವೆ ಬಹಳ ಪ್ರಸಿದ್ಧ

ಸಣ್ಣ ರವೆ ಮೂಟೆ	7–8–0,	8–0–0	ಮೈದಾಹಿಟ್ಟು	7–8–0,	8 0...
ಚಿರೋಟಿ ರವೆ	8–0–0,	8–8–0	ಕಡ್ಲೆಹಿಟ್ಟು	5–12 0,	6–8...
ಬಾಂಬೆ ರವೆ	9–0–0,	10–0–0	ಗೋಧಿ ಹಿಟ್ಟು	6–8–0,	8 0...

ಬೀಳಿ ಗೋಧಿ ರೂ ಗೆ 2 ಸೇರು

ಹೊಸ ವರುಷದ ವಂದನೆಗಳು

ಕೃಷ್ಣಾ ಸೋಷಿಯಲ್ ಮಿಲ್,

ಮೋತಿಖಾನೆ ಬಿಲ್ಡಿಂಗ್ಸ್,　　ಸಂತೆಪೇಟೆ, ಮೈಸೂರು

ಹೊಸ ವರ್ಷದ ಶುಭಾಶಯಗಳು!

ನಮ್ಮ ಹಿತೈಷಿಗಳಿಗೂ ಮತ್ತು ಸಮಸ್ತ ಗಿರಾಕಿಗಳಿಗೂ ಹೊಸ ವರ್ಷದ ಶುಭಾಶಯಗಳನ್ನು ಕೋರುತ್ತೇವೆ

ಇಂದ್ರ ಕೆಫೆ

ಸಯ್ಯಾಜಿರಾವ್ ರೋಡ್, ಮೈಸೂರು.

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರವಿದ್ದಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕಳುಹಿಸಿ ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಚಂದಾ ದರ
[illegible]

[illegible] ರ] SADHVI : WEDNESDAY 2—1—1957 [illegible] : ಬುಧವಾರ ೨—೧—೧೯೫೭ [ಸಂಚಿಕೆ : [illegible]

[illegible]ಷ ದರ್ಜೆಯ ನೌಕರರಿಗೆ ಹೆಚ್ಚು ಸಂಬಳದ ಬಗ್ಗೆ ಆಜ್ಞೆ

[illegible]ಸೂರು ಸರ್ಕಾರದ ನೌಕರರಿಗೆ [illegible]ಷ್ಟಿನ ಸಂಬಳಸಾರಿಗೆಗಳು

[illegible]ನ್ನೆ ಸಂಜೆ ಸರ್ಕಾರದ ತೀರ್ಮಾನದ ಪ್ರಕಟಣೆ

ಬೆಂಗಳೂರು ೨

[illegible]ಸ್ಥಾನ ಸರ್ಕಾರದವರು ನೆನ್ನೆ ಸಂಜೆ ತಮ್ಮ [illegible]ರುಗಳ ಸಂಬಳ ಮತ್ತು ತುಟ್ಟಿಭತ್ಯಗಳ ಹೊಸ ಆಜ್ಞೆಯನ್ನು ಹೊರಡಿಸಿದರು ಅದ[illegible] ಕೆಲ ಗಂಟೆ ಕಾಲ ಮಂತ್ರಿಮಂಡಲದ [illegible] ನಡೆದ ಮುಖ್ಯ ಮಂತ್ರಿ ಶ್ರೀ ನಿಜಲಿಂ[illegible]ಪರು ಪತ್ರಿಕಾ ಪ್ರತಿನಿಧಿಗಳಿಗೆ ಸರ್ಕಾರದ [illegible]ವನ್ನು ತಿಳಿಸಿದರು ಈ ಸಮಸ್ಯೆಯನ್ನು [illegible]ಯ ದೃಷ್ಟಿಯಿಂದ ಪರಿಶೀಲಿಸಲಾಗಿರು[illegible] ಅವರು ಹೇಳಿ, ನೂತನ ಸಂಸ್ಥಾನದ [illegible] ಸ ಧನೆಗೆ ನೌಕರರು ನೆರವಾಗಬೇ[illegible] ಕೋರಿದರು

[illegible] ಭತ್ಯವೂ ಸೇರಿ, ಕನಿಷ್ಠವಾಗಿ ಪ್ರತಿ ತಿಂ[illegible] [illegible]ರಗಳಲ್ಲಿ ೫೦ ಮತ್ತು ಇತರ ಕಡೆಗಳ[illegible] [illegible] ಪಡೆಯುವವರು ಗೆಜೆಟೆಡ್ ಅಧಿ[illegible] [illegible] ಕನಿಷ್ಠ ಮತ್ತು ಪರಮಾವಧಿ ಸಂಬಳ [illegible] ಗೊತ್ತು ಪಡಿಸಲಾಗಿದೆ ಅದರ ಪ್ರಕಾರ [illegible] ೧ ೨೦೦-೫೦-೧,೫೦೦ ರೂ ಅನ್ನು [illegible]ವಧಿಯಾಗಿ ಕೊಡಲಾಗುವುದು [illegible] [illegible]ವನ್ನು ೨೦೮ ೧೫-೩೫೦ ರೂ ಗೆ ಗೊತ್ತು [illegible] ಸರ್ಕಾರದ ನಿರ್ಧಾರಗಳು ಈ ರೀತಿ

[illegible]ವರಿಗೆ ೧೮ ಮತ್ತು ೧೮ ರೂ ನಿಂದ ೨೫ [illegible] ಸಂಬಳ ಹೆಚ್ಚಿಸಿ ನಗರಗಳಲ್ಲಿದ್ದರೆ ೨೫ [illegible]ಡೆ ೨೦ ರೂ ತುಟ್ಟಿಭತ್ಯವನ್ನು ಕೊಡ[illegible] [illegible]ವು

[illegible]ಸು ಕಾನ್ಸ್‌ಟೇಬಲ್ಲುಗಳಿಗೆ ೨೨-೧/೨-೩೨ [illegible]ನಿಂದ ೩೦-೧/೨-೪೦ ರೂ

[illegible] ಭತ್ಯವೂ ಎಲ್ಲಾ ನೌಕರರಿಗೂ ಕನಿಷ್ಠ [illegible] ಪರಮಾವಧಿಯು ೫೦ ರೂ ಇದ್ದು [illegible]ವರೆ ೨೦ ಮತ್ತು ೬೫ ರೂ ಆಗಲಿದೆ [illegible]ಇಲಾಖೆಯಲ್ಲಿ ಪ್ರತಿ ಹುದ್ದೆಯ ಸಂಬ[illegible] [illegible]ಯನ್ನೂ ಪುನರ್ವಿಮರ್ಶಿಸಲಾಗಿದೆ [illegible] ಸಂಬಳವನ್ನು ಗೊತ್ತುಪಡಿಸುವಾಗ [illegible]ನ್ನು ಮಂಜೂರು ಮಾಡಲಾಗಿದೆ ಹೊ[illegible] [illegible]ನಲ್ಲಿ ಮೂರು ವರ್ಷ ಸರ್ವೀಸಿಗಾಗಿ ೧ [illegible]ತ್ತು ಹೆಚ್ಚಿನ ಅವಧಿಗಾಗಿ ೨ ಬಡ್ತಿಗಳ [illegible] ಪ್ರತಿ ನೌಕರನಿಗೂ ಮುಂದಿನ ಸಂಬಳ [illegible] ಈಗಲೇ ಸಿಗುವುದು

[illegible]ಪ್ರಿಂಟ್ ನಾನ್ ಗೆಜೆಟೆಡ್ ನೌಕರರಿಗೆ [illegible] ರೂ ಗೆ ಕಡಿಮೆ ಇಲ್ಲದಂತೆ ಒಟ್ಟು ೨೫ [illegible]ಂದು ಬಡ್ತಿಯೂ ಗೆಜೆಟೆಡ್ ನೌಕರ[illegible] ರೂ ದೊರೆಯುವುವು.

[illegible] ನೌಕರರ ಸಂಬಳವನ್ನು ವಿಮರ್ಶಿ[illegible] [illegible] ೨೦ ರ ಪ್ರಮಾಣಕ್ಕೆ ಏರುವಂತೆ [illegible]ಡಿಸಲಾಗಿದೆ ಅವರ ಭತ್ಯಗಳನ್ನು [illegible] [illegible] ಕನಿಷ್ಠಾಂಶವನ್ನು ನೂ ೮ ಸ ೬

[illegible] ಪ್ರಮಾಣದ ಸಂಬಳವನ್ನು ಅಂಗೀಕರಿ[illegible] [illegible] ಬಡಲು ಪ್ರತಿ ನೌಕರ ಗೂ ಅವ[illegible]

[illegible] ಕೊಡಲಾಗುತ್ತದೆ ಅದೇ ಅಕ್ಟೋಬರ ನಿ[illegible] ಧಾರ

ಪೇಷ್‌ದಾರರುಗಳ ತುಟ್ಟಿಭತ್ಯವನ್ನು ೨೦ ರೂ ಗೆ ಕಡಿಮೆ ಇದ್ದವರಿಗೆ ೪ ರೂ ೪೦ರ ಒಳಗೆ ಇದ್ದರೆ ೫ ರೂ ಮತ್ತು ಮೇಲ್ಪಟ್ಟು ಇದ್ದರೆ ೬ ರೂ ನಂತೆ ಕೊಡಲಾಗುವುದು

ಉಪಾಧ್ಯಾಯರ ಸಂಬಳದ ಪ್ರಮಾಣ

ಪದವೀಧರರಿಗೆ [illegible] ೧೦ ೧೮೦ ರೂ (ಬಿ ಟಿ ಮತ್ತು ಬಿ ಇಡಿಗಳಿಗೆ ೨೦೦) ಮಾಧ್ಯಮಿಕ ಶಾಲೆಗಳ ಎಸ್ ಎಸ್ ಎಲ್ ಸಿ ಉಪಾಧ್ಯಾಯರಿಗೆ (ತರಬೇತಾದವರು ಮತ್ತು ಇಲ್ಲದವರು) [illegible] ೧೨೦ ರೂ ಪ್ರಾಥಮಿಕ ಶಾಲಾ ನಾನ್ ಎಸ್ ಎಸ್ ಎಲ್ ಸಿ ಶಿಕ್ಷಣ ಪಡೆದವರಿಗೆ ೪೦ ೨ ೫೦-೩ ೮೦ ಮತ್ತು ಇಲ್ಲದವರಿಗೆ ೩೦ ೧-೫೦-೨ ೩೦

ವಿಶ್ವವಿದ್ಯಾಲಯದ ಅಧ್ಯಾಪಕರುಗಳ ವೇತನದ ಬಗ್ಗೆ ತೀರ್ಮಾನವು ವಿಶ್ವವಿದ್ಯಾಲಯಕ್ಕೆ ಸೇರಿದೆ

ಅಸಿಸ್ಟೆಂಟ್ ಸರ್ಜನ್ (ಎಂ ಬಿ ಬಿ ಎಸ್) ೨೨೫-೨೦ ೩-೫ ೨೫ ೫೦೦ ರೂ ಎಲ್ ಎಂ ಪಿ ಆದವರಿಗೆ ೯೦-೫-೧೨೦-[illegible]-೧೮೦-೧೦ ೨೫೦ ರೂ ದಾದಿಯರಿಗೆ ೬೫-೫ ೧೨೦-೬-೧೫೦ ರೂ

ಮರಾಮತ್ತು ಇಲಾಖೆ ಸೂಪರ್‌ವೈಸರುಗಳಿಗೆ—೧೫೦ ೧೦ ೩೦೦ ರೂ ಓವರ್‌ಸೀಯರುಗಳಿಗೆ ೧೨೦ ೧೦-೨೦೦ ರೂ, ಡ್ರಾಫ್ಟ್ಸ್‌ಮೆನ್ನುಗಳಿಗೆ ೧ನೇ ಗ್ರೇಡು ೧೫೦-೧೦-೨೫೦, ೨ನೇ ಗ್ರೇಡು ೧೨೦-೧೦ ೨೦೦ ೩ನೇ ಗ್ರೇಡು ೬೦-೫-೯೦-೬ ೧೫೦

ಪೊಲೀಸು ಇನ್ಸ್‌ಪೆಕ್ಟರುಗಳಿಗೆ ೧೭೫-೧೦-೨೨೫ E B ೧೦-೨೭೫ ರೂ ಸಬ್ ಇನ್ಸ್‌ಪೆಕ್ಟರಿಗೆ ೪೦ ೫ ೧೦೦ ೮ ೧೪೦ ೧೦ ೨೦೦ ರೂ

ರೆವಿನ್ಯೂ ಇನ್ಸ್‌ಪೆಕ್ಟರುಗಳ ಸಂಬಳವು ಶಿರುವಾಂಕೂರು ಮತ್ತು ಮದ್ರಾಸು ಸ್ಕೇಲಿಗಿಂತ ಹೆಚ್ಚಿದೆ ಮೋಟಾರುವಾಹನ ಇನ್ಸ್‌ಪೆಕ್ಟರುಗಳು ಮುಂಬಾಯಿಯವರಿಗಿಂತ ಹೆಚ್ಚು ಸಂಬಳ ಪಡೆಯುವರು. ಇಲಾಖೆಯಲ್ಲಿ ೧ ಮತ್ತು ೨ನೇ ದರ್ಜೆ ರೇಂಜರಿಗೆ ಬೊಂಬಾಯಿ ಮಟ್ಟದ ಸಂಬಳ

ಆರೋಗ್ಯ ಇಲಾಖೆಯ ಇನ್ಸ್‌ಪೆಕ್ಟರಿಗೆ ೧ ಮತ್ತು ೨ನೇ ಗ್ರೇಡಿನವರಿಗೆ ಮದ್ರಾಸು ಸ್ಕೇಲಿಗಿಂತ ಉತ್ತಮ ಪಶು ವೈದ್ಯ ಇಲಾಖೆಯವರಿಗೆ ಬೊಂಬಾಯಿನವರಿಗಿಂತ ಕೊಂಚ ಮೇಲು ವಿದ್ಯುಚ್ಛಕ್ತಿ ಇಲಾಖೆ ಓವರ್‌ಸೀಯರುಗಳು ಬೊಂಬಾಯಿನವರಿಗಿಂತ ಹೆಚ್ಚು ಪಡೆಯುವರು ಅಬ್ಕಾರಿ ಇಲಾಖೆಯವರು ಮದ್ರಾಸು ಮತ್ತು ತಿರುವಾಂಕೂರಿನವರಂತೆ ಪಡೆಯುವರು

ಪದವೀಧರ ಉಪಾಧ್ಯಾಯರುಗಳಿಗೆ ಕೊಡುವಂತೆ ಸಂಗೀತರು ಮತ್ತು ಮುನ್ಷಿಗಳಿಗೆ ಸಂಬಳ ಕೊಡುವುದು ಒಂದು ವಿಶೇಷ

ಈ ಎಲ್ಲ ನಿರ್ಧಾರಗಳಿಂದ ವರ್ಷವೊಂದಕ್ಕೆ ೪ ಕೋಟಿ ರೂ ವೆಚ್ಚ ಹೆಚ್ಚುವುದು ಶೇಕಡ ೯೦ ಮಂದಿಗೆ ಹೊಸ ಸೌಲಭ್ಯವು ದೊರೆಯುವುದು

[illegible] ಕಸ್ಬೆಗಳು ವ್ಯವಹಾರವಿದ್ದರೆ [illegible]

ನೂತನ ಮೈಸೂರಿನ ಚುನಾವಣಾ ಕ್ಷೇತ್ರಗಳು

ನಗರ ಮತ್ತು ಜಿಲ್ಲೆಯ ವಿಭಾಗಗಳು

ಬೆಂಗಳೂರು ೨

ಲೋಕ ಸಭೆ ಮತ್ತು ಸಂಸ್ಥಾನದ ವಿಧಾನ ಸಭಾ ಚುನಾವಣಾ ಕ್ಷೇತ್ರಗಳನ್ನು ಗೊತ್ತುಪಡಿಸಿ, ಪ್ರಕಟಣೆಯೊಂದನ್ನು ಹೊರಡಿಸಲಾಗಿದೆ ಲೋಕ ಸಭೆಗೆ ಒಟ್ಟು ೨೬ ಸ್ಥಾನಗಳಿವೆ ಹಿಂದೆ ಕೊಡಗಿಗೆ ಇದ್ದ ಲೋಕಸಭಾ ಸದಸ್ಯ ಸ್ಥಾನವು ಇರುತ್ತಿಲ್ಲ ತಿಪಟೂರಿಗೆ ಪ್ರತ್ಯೇಕ ಸ್ಥಾನವನ್ನು ಹೊಸದಾಗಿ ಕಲ್ಪಿಸಲಾಗಿದೆ ಹೊಸ ಏರ್ಪಾಡಿನ ಪ್ರಕಾರ ಹಾಸನ, ಮಂಡ್ಯ ಜಿಲ್ಲೆಗಳೂ ಪೂರ್ಣವಾಗಿ ಒಂದೊಂದು ಚುನಾವಣಾ ಕ್ಷೇತ್ರಗಳಾಗುವುವು

ಶಾಸನ ಸಭಾ ಕ್ಷೇತ್ರಗಳನ್ನು ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಈ ರೀತಿ ಗೊತ್ತುಪಡಿಸಲಾಗಿದೆ —

೨, ೪ರಿಂದ ೧೩, ೧೪ರಿಂದ ೧೯ ಡಿವಿಜನ್‌ಗಳು ಮೈಸೂರು ನಗರ

೨೦ರಿಂದ ೨೭, ೩೦ರಿಂದ ೩೩, ೩೫ರಿಂದ ೩೭ ಮತ್ತು ೪೦ ಡಿವಿಜನ್ನುಗಳು ಸೇರಿ ಮೈಸೂರು ಉತ್ತರ ಕ್ಷೇತ್ರ

ನಗರದ ೧, ೩, ೧೨, ೨೮, ೨೯ ೩೪, ೩೮ ಮತ್ತು ೩೯ ಡಿವಿಜನ್‌ಗಳು, ಜಯಪುರ ಮತ್ತು ಇಲವಾಲ ಹೋಬಳಿ ಮತ್ತು ಮೈಸೂರು ಕಸಬಾ ಸರ್ಕಲ್ ಸೇರಿ ೧ ಕ್ಷೇತ್ರ

ಕೊಳ್ಳೇಗಾಲ ಫಿರ್ಕಾ ಬಿಟ್ಟು ತಾಲ್ಲೂಕು—ಶಾಸಯಂ ಕ್ಷೇತ್ರ

ಯಳಂದೂರು ತಾಲ್ಲೂಕು, ಕೊಳ್ಳೇಗಾಲ ಫಿರ್ಕಾ, ಟಲಕಾಡು ಸೋಸಲೆ ಮತ್ತು ಬನ್ನೂರು ಹೋಬಳಿ ಸೇರಿ ಕೊಳ್ಳೇಗಾಲ ಕ್ಷೇತ್ರ ೨

ಟಿ ನರಸೀಪುರ ಮತ್ತು ಮೂಗೂರು ಹೋಬಳಿಗಳು, ಮೈಸೂರು ತಾಲ್ಲೂಕಿನ ವರುಣ ಹೋಬಳಿ ಮತ್ತು ಮೈಸೂರು ಹೋಬಳಿ ಯ ಮಂಡಕಳ್ಳಿ ಫಿರ್ಕಾ ಸೇರಿ—ಟಿ ನರಸೀಪುರ ಕ್ಷೇತ್ರ ೨

ಇದಲ್ಲದೆ ನಂಜನಗೂಡು ಬಳಗೆರೆ, ಚಾಮರಾಜನಗರ (೨), ಗುಂಡ್ಲುಪೇಟೆ ಹುಣಸೂರು (೨), ಕೃಷ್ಣರಾಜನಗರ ಮತ್ತು ಪಿರಿಯಾಪಟ್ಟಣ ಕ್ಷೇತ್ರಗಳೂ ಇವೆ

[illegible]ದೇ ಮಟ್ಟವನ್ನು ತನ್ನ ನೌಕರರಿಗೆ ಕೊಡಬೇಕೆಂದು ತಿಳಿಸಲಾಗಿದೆ

ನೌಕರರಿಗೆ ಇದುವರೆಗೆ ಕೊಡಲಾಗುತ್ತಿದ್ದ ತಾತ್ಕಾಲಿಕ ಪರಿಹಾರವನ್ನು ಈ ತಿಂಗಳಿಂದ ತಪ್ಪಿಸಲಾಗುವುದು

ಪೈಯರ್ ಗ್ರೇಗ್ಸ್ ಸ್ಕೇಲಿನ ಇದ್ದ ಪರಮಾವಧಿ ಸಂಬಳ ಪಡೆಯುತ್ತಿರುವವರಿಗೆ ೨ ಬಡ್ತಿಗಳನ್ನು [illegible]ಯಲಾಗುವುದು

ಸರ್ಕಾರಿ ನೆರವು ಪಡೆದ ಶಾಲಾ ಅಧ್ಯಾಪಕರುಗಳ ಸಂಬಳದ ಬಗ್ಗೆ ಪರಿಶೀಲಿಸಿ ಮಾಡಲಾಗುವುದು

ಸರ್ಕಾರಿ ಕಾರ್ಖಾನೆಗಳಲ್ಲಿರುವವರ ಸಂಬಳದ ವಿಚಾರವನ್ನು ಪರಿಶೀಲಿಸಲು ಪ್ರತ್ಯೇಕ ಸಮಿತಿಯನ್ನು ರಚಿಸಲಾಗುವುದು

ಸಂಸ್ಥಾನದಲ್ಲಿ ಮೇ ತಿಂಗಳು ವಿನೋಬಾಭಾವೆಯವರ ಪ್ರವಾಸ

ಆಚಾರ್ಯ ವಿನೋಬಾಭಾವೆಯವರು ಬರುವ ಮೇ ತಿಂಗಳಲ್ಲಿ [illegible] ಸಂಸ್ಥಾನದಲ್ಲಿ ಪ್ರವಾಸ ಕೈಗೊಳ್ಳುವರೆಂದು ಗೊತ್ತಾಗಿದೆ ಅವರ ಸಂಚಾರವು ಮಂಗಳೂರಿನಲ್ಲಿ ಆರಂಭವಾಗಲಿದೆ ಅದೇ ಸಂದರ್ಭದಲ್ಲಿ ಹೊಸಪೇಟೆಯಲ್ಲಿ ಸರ್ವೋದಯ ಸಮ್ಮೇಳನವೊಂದು ನಡೆಯುವುದು.

ಕಾಳಿಯ ಪ್ರತ್ಯಕ್ಷವಾಗಿ ನರಬಲಿ

ರಾಜಸ್ಥಾನದ ಬಿಕ್ಕಾನೇರ್ ಜಿಲ್ಲೆಯ ಗೆರಾರ್ ಮೂಲ ಎಂಬ ಗ್ರಾಮದಲ್ಲಿರುವ ಕಾಳಿ ದೇವಸ್ಥಾನದ ಪೂಜಾರಿಯು ಬೆಳಿಗ್ಗೆ ಗುಡಿಯ ಬಾಗಿಲನ್ನು ತೆಗೆದೊಡನೆಯೇ ದೇವರ ಮುಂದೆ ಹೊಸ್ತ ತಟ್ಟೆಯೊಂದರಲ್ಲಿ ಒಬ್ಬ ಮನುಷ್ಯನ ತಲೆ ಮತ್ತು ಒಂದು ಹೋತದ ತಲೆಗಳನ್ನು ಇಟ್ಟಿದ್ದುದನ್ನು ಕಂಡು ಮೂರ್ಛಿತನಾದನೆಂದು ವರದಿಯಾಗಿದೆ ದೇವರಿಗೆ ಈ ಕಾಣಿಕೆಗಳನ್ನು ಅರ್ಪಿಸಿದವರನ್ನು ಪೋಲೀಸರು ಹುಡುಕುತ್ತಿರುವರು

ಬೆಂಗಳೂರು ರೇಡಿಯೋ ಕಾರ್ಯಕ್ರಮ

ಬೆಳಿಗ್ಗೆ ೭-೫ ಓಲೇಲು ಮತ್ತು ಸೆಲ್ಲೊ. ೭-೧೫ ಟಿ. ಸುಂದರರಾಜಯ್ಯಂಗಾರ್—ದೇವರನಾಮ ೭-೩೦ ಮತ್ತು ೮-೧೫ ಕೆ ಎಸ್ ನಾರಾಯಣಾಚಾರ್—ಅಷ್ಟಕಾವ್ಯ ಮಧ್ಯಾಹ್ನ ೧೨ ಟಿ. ಸುಂದರರಾಜಯ್ಯಂಗಾರ್—ಸಂಗೀತ ೧೨-೩೦ ಎಸ್ ವಿ ಶ್ರೀನಿವಾಸಯ್ಯಂಗಾರ್—ವೀಣೆ ೧ ೪ ೦ [illegible] ಉಭಯ [illegible]—ಹಿಂದೂಸ್ಥಾನಿ ಸಂಗೀತ. ೧ ೫೦ ಓಲೇಲು ಮತ್ತು ಸೆಲ್ಲೊ ೨-೧೫ ಸಂಗೀತ ಆಧಾರ. ಸಂಜೆ ೫-೩೦ ಹಿಂದೂಸ್ಥಾನಿ ಸಂಗೀತ ೬-೫ ವಿರಾಮ ಸಂಗೀತ ೬ ೨೦ ಚಾಪೆಕರ್ ನೃತ್ಯ ೭-೩೦ ಕಾಲ ವಾದ್ಯ ಗೋಷ್ಠಿ ೮ ವೀಣಾ ವಾದನ. ೮-೩೦ ನಿಮ್ಮ ಮೆಚ್ಚಿನ ಗೀತೆ ೯-೧೫ ಭಾಷಣ ೯-೩೦ ನಾಟಕ ೧೦.೧೫ [illegible] ಲಹರಿ

ಸರ್ಕಾರಿ ಮಟ್ಟದ ಸಂಬಳಕ್ಕಾಗಿ ಅರಮನೆ ನೌಕರರ ಒತ್ತಾಯ

ಅರಮನೆಯ ಕೆಳ ದರ್ಜೆ ನೌಕರರ ಸಭೆಯು ಮೊನ್ನೆ ಸೇರಿದ್ದು, ನೌಕರರಿಗೆ ಕೊಡಲಾಗುತ್ತಿರುವ ಸಂಬಳವು ತೀರಾ ಕಡಿಮೆಯೆಂದೂ, ಸರ್ಕಾರಿ ನೌಕರರಿಗೆ ದೊರೆಯುತ್ತಿರುವ ಮಟ್ಟಕ್ಕೆ ತಮ್ಮ ಸಂಬಳವನ್ನು ಹೆಚ್ಚಿಸಬೇಕೆಂದೂ ಕೋರುವ ನಿರ್ಣಯವನ್ನು ಮಾಡಲಾಯಿತು ಈ ಬಗ್ಗೆ ಮಹಾರಾಜ ಕಾರ್ಯದರ್ಶಿಯವರಲ್ಲಿ ನಿಯೋಗ ಹೋಗಲೂ ಮತ್ತು ನೌಕರರ ಸಂಘವೊಂದನ್ನು ಸ್ಥಾಪಿಸಲೂ ನಿರ್ಧರಿಸಲಾಯಿತು

ಒಂದಾನೊಂದು ಕಾಲದಲ್ಲಿ ಟಿಬೆಟ್ಟಿನವರ ದೇವಾಲಯವೊಂದನ್ನು ನಿರ್ಮಿಸಲು ದಲೈಲಾಮಾರವರು ಒಪ್ಪಿದ್ದಾರೆ. ೨ ಲಕ್ಷ ರೂ ನಿಂದ ಅದನ್ನು ನಿರ್ಮಿಸಲಾಗುವುದು ಟಿಬೆಟ್ಟಿನಿಂದ ಬುದ್ಧ ಜೀವನ ಪ್ರತಿಮೆಯನ್ನು ತಂದು ಪ್ರತಿಷ್ಠಿಸಲಾಗುವುದು

ಸಮಾಜವಾದಿ ಪಕ್ಷದವರ ಸಮ್ಮೇಳನ

ಮಧ್ಯ ಪ್ರದೇಶದ ಶ್ರೀನಿವಾಸದ ದವಲ್ಲಿ ಭಾರತದ ಸಮಾಜವಾದಿಗಳ ಪ್ರಥಮ ಅಧಿವೇಶನವು ಮೊನ್ನೆ ನಡೆಯಿತು, ಮುಂದಿನ ಚುನಾವಣೆಗಳಲ್ಲಿ ಇತರ ಪಕ್ಷಗಳೊಡನೆ ಚುನಾವಣಾ ಸಖ್ಯವನ್ನು ನಡೆಸಬಾರದೆ ಎಂಬ ನಿರ್ಣಯವನ್ನು ಅಂಗೀಕರಿಸಿತು ದೇಶದ ನಿರುದ್ಯೋಗ ಮತ್ತು ಬಡತನಗಳ ಬಗ್ಗೆ ಸರ್ಕಾರದ ಆತಂಕವನ್ನು ವ್ಯಕ್ತಪಡಿಸಿ ಸಾಧನೆಯನ್ನು ಕೊನೆಗಾಣಿಸಿ ಸಮಾನ ಮತ್ತು ನವ ಸಮಾಜವನ್ನು ಕಲ್ಪಿಸುವುದಕ್ಕೆ ಪ್ರಮುಖ್ಯತೆಯನ್ನು ಕೊಟ್ಟು ಅದನ್ನು ಸಾಧಿಸಲು ವೈಯಕ್ತಿಕ ಮತ್ತು ಸಾಮೂಹಿಕ ನಾಗರಿಕ ಭಂಗ ಚಳುವಳಿಯು ನಡೆಯುವುದು ಅಗತ್ಯವೆಂದು ಸೂಚಿಸಿತು ಕಾಮನ್ವೆಲ್ತಿನಿಂದ ಭಾರತವು ಹೊರಕ್ಕೆ ಬರಬೇಕೆಂದೂ ಸೂಚಿಸಲಾಯಿತು

ಗ್ರಾಮಾಂತರ ಸಂಸಾರಗಳಿಗೆ ತಲಾ ೨೦೦ ರೂ ಸಾಲ

ರಿಸರ್ವ್ ಬ್ಯಾಂಕಿನ ಅಖಿಲ ಭಾರತ ಗ್ರಾಮಾಂತರ ಸಾಲದ ಸರ್ವೆಯ ಸಮಿತಿಯೊಂದು ನಡೆಸಿದ ಪರಿಶೀಲನೆ ಪ್ರಕಾರ ಗ್ರಾಮಾಂತರ ಸಂಸಾರದಲ್ಲಿ ಸರಾಸರಿ ೨೦೦ ರೂ ಸಾಲವಿರುವುದೆಂದು ವ್ಯಕ್ತವಾಗಿದೆ ಶೇಕಡ ೭೦ ಸಂಸಾರಗಳು ಸಾಲದಲ್ಲಿ ತೊಳಲುತ್ತಿವೆ ಬೇಸಾಯಗಾರರಲ್ಲಿ ಇದು ಹೆಚ್ಚಾಗಿದೆ ಪ್ರತಿ ಭಾರತೀಯ ಸಂಸಾರದ ಸರಾಸರಿ ವರಮಾನವು ೬೦೦ ರೂ

ಕಥಾ ಕಾಲಕ್ಷೇಪ

ಮೈಸೂರು ನಗರದ ಹೊಸಹಳ್ಳಿ ಕಬೀರ ರಸ್ತೆಯಲ್ಲಿರುವ ಶ್ರೀ ರಾಮ ಮಂದಿರದಲ್ಲಿ ಹರಿದಾಸ ಶ್ರೀ ವೆಂಕಟೇಶದಾಸರು ಪ್ರತಿ ದಿನ ಸಂಜೆ ಗಂಟೆಗೆ ಏಕಾದಶೀ ಮಹಿಮೆ ಎಂಬ ವಿಷಯದ ಮತ್ತು ಇತರ ಕಥೆಗಳ ಕಾಲಕ್ಷೇಪವನ್ನು ಕೆಲವು ದಿವಸಗಳ ಪರ್ಯಂತ ನಡೆಸುತ್ತಿದ್ದಾರೆ

ಕಾವ್ಯ ವಾಚನ ಸ್ಪರ್ಧೆ

ಮಂಡ್ಯದ ಕರ್ನಾಟಕ ಸಂಘದ ಆಶ್ರಯದಲ್ಲಿ ಕಳೆದ ವಾರ ನಡೆದ ಕಾವ್ಯ ವಾಚನ ಸ್ಪರ್ಧೆಯಲ್ಲಿ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದರು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದರು ಮೈಸೂರಿನ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಇತರರೂ ಭಾಗವಹಿಸಿದ್ದರು ನಗರದವರಾದ ಶ್ರೀ ವೆಂಕಟೇಶ ಗದುಗಿನ ಕಾವ್ಯ ವಿದ್ಯಾರ್ಥಿಯು ಬಹುಮಾನ ಪಡೆದರು ದ್ವಿತೀಯ ಸ್ಥಾನವನ್ನು ಪಡೆದು ಗೌರವ ಸಂಪಾದಿಸಿರುವರು

ಹಿಂದಿ ಪ್ರೊಫೆಸರರ ಭಾಷಣ

ನಗರದ ಹಿಂದೀ ಪ್ರಚಾರ ಸಭೆಯ ಆಶ್ರಯದಲ್ಲಿ ಅಲಹಾಬಾದ್ ವಿಶ್ವವಿದ್ಯಾನಿಲಯದ ಹಿಂದೀ ವಿಭಾಗದ ಅಧ್ಯಕ್ಷರಾದ ಡಾ॥ ಧೀರೇಂದ್ರವರ್ಮ ಮತ್ತು ಮಧ್ಯಪ್ರದೇಶ ವಿಶ್ವವಿದ್ಯಾಲಯದ ಹಿಂದಿ ಪ್ರೊಫೆಸರ್ ಶ್ರೀ ವಿನಯಮೋಹನ ಶರ್ಮರವರು ನಗರದ ಹಿಂದೀ ಸಾಹಿತ್ಯ ಕರ್ತರು ಮತ್ತು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಸಂಜೆ ಗಂಟೆಗೆ ಭಾಷಣ ಮಾಡುವರು ಸರ್ವರಿಗೂ ಆಹ್ವಾನವಿದೆ

ಕೃತಜ್ಞತೆ

ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪೆನಿಯ ಇನ್ಸ್‌ಪೆಕ್ಟರ ದ ಶ್ರೀ ಎಂ ಎನ್ ಜಯಸಿಂಹರವರು ಮತ್ತು ದೇವ ರಾಜ ಮಾರ್ಕೆಟ್ಟಿನಲ್ಲಿರುವ ಸೌಭಾಗ್ಯ ಸ್ಟೋರಿನ ಮಾಲೀಕರಾದ ಶ್ರೀ ಎಸ್ ಗೋಪಾಲಯ್ಯರು ಕಳುಹಿಸಿರುವ ನೂತನ ವರ್ಷದ ಶುಭಾಶಯಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇವೆ

ಪ್ರಧಾನಿ ನೆಹರೂರವರಿಗೆ ನ್ಯೂಯಾರ್ಕ್ ನಗರದಲ್ಲಿ ಸತ್ಕಾರ



ಪ್ರಧಾನಿ ನೆಹರೂರವರು ನ್ಯೂಯಾರ್ಕ್ ನಲ್ಲಿ ಭಾರತದ ರಾಯಭಾರಿ ಕಛೇರಿಯು ಔತಣ ಕೂಟದಲ್ಲಿ ಭಾಗವಹಿಸಿದಾಗ ತೆಗೆದ ಚಿತ್ರ ಅಲ್ಲಿನ ಸ್ಥಳೀಯ ಕಲಾವಿದರೊಬ್ಬರು ಚಿತ್ರವೊಂದನ್ನು ಅರ್ಪಿಸುತ್ತಿರುವುದು

ಹೋಟೆಲುಗಳು ಅನ್ನಸತ್ರಗಳಂತೆ ಸೇವೆ ಮಾಡಬೇಕು

ಮದ್ರಾಸಿನಲ್ಲಿ ಮೈಸೂರು ಗವರ್ನರರ ಭಾಷಣ

ಮದ್ರಾಸಿನಲ್ಲಿ ಶ್ರೀ ಕೆ ಸೀತಾರಾಮರಾವ್ ರವರ ಡಾಸಪ್ರಕಾಶ ಭವನದಲ್ಲಿ ಕಳೆದ ಶನಿವಾರ ಮೈಸೂರಿನ ಗವರ್ನರ್ ಶ್ರೀ ಜಯಚಾಮರಾಜ ಒಡೆಯರು ಶ್ರೀ ರಾಮರ ತಂದೆ ಗೋವಿಂದರಾಯರ ಛಾಯಾಚಿತ್ರವನ್ನು ಅನಾವರಣ ಮಾಡಿದರು ಶ್ರೀ ಸೀತಾರಾಮರಾಯರು ಗವರ್ನರರನ್ನು ಪೂರ್ಣಕುಂಭದೊಡನೆ ಸ್ವಾಗತಿಸಿದರು

ಗವರ್ನರರು ತಮ್ಮ ಭಾಷಣದಲ್ಲಿ ಡಾಸಪ್ರಕಾಶ ಹೊಟೇಲು ಒಂದು ಆದರ್ಶವಾಗಿರುವುದಕ್ಕಾಗಿ ಸಂತೋಷವನ್ನು ಸೂಚಿಸಿದರು ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು ಕೈಗೊಂಡಿರುವ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಕಾರ್ಯಗಳಲ್ಲಿ ಪ್ರಜೆಗಳ ಸಹಕಾರವು ಬಹಳ ಅವಶ್ಯವೆಂದೂ ಆದರಿಂದ ಹೋಟೆಲುಗಳು ಅಭಿವೃದ್ಧಿಗೆ ಅವರ ಸಹಕಾರವೆಂದೂ ಹೋಟೆಲುಗಳು ಹೊಸ ರೀತಿಯಲ್ಲಿ ಜನಸೇವೆ ಮಾಡಬೇಕೆಂದೂ ತಿಳಿಸಿದರು ಹೋಟೇಲುಗಳು ಅನ್ನಸತ್ರಗಳ ಸ್ಥಾನವನ್ನು ವಹಿಸಬೇಕೆಂದು ಸಲಹೆ ಮಾಡಿದರು

ಕ್ಯಾಲೆಂಡರ್, ಸ್ವೀಕಾರ

ನಗರದ ಶ್ರೀ ರಾಮಪೇಟೆಯಲ್ಲಿರುವ ರಾಜಾ ಅಂಡ್ ಕಂಪೆನಿಯವರು ಕಳುಹಿರುವ ನೂತನ ವರ್ಷದ ಇಂಗ್ಲಿಷ್ ಕ್ಯಾಲೆಂಡರನ್ನು ಆದರದಿಂದ ಸ್ವೀಕರಿಸಿದ್ದೇವೆ

SREE GANESH
TALKIES
PICNIC
(Cinemascope & Technicolor)
Extended for 2 more days

From 5—1—1957
VALUE FOR MONEY
(Technicolor & Vistavision)

Edited Printed and Published by A R Nagarajan at Sadhvi Press D Subbarao Road, Mysore

ತೋಳ ಮತ್ತು ಕುರಿಗಳ ಸ್ನೇಹ

ಕುರಿಯು ಶರಮ ವೈರಿಯೆಂದು ಪರಿಗಣಿತವಾದ ತೋಳವು ಕುರಿಗಳೊಡನೆ ಸ್ನೇಹ ಬೆಳೆಸಿರುವ ಸುದ್ದಿಯು ವರದಿಯಾಗಿದೆ ಗುಲ್ಬರ್ಗ ಬಳಿಯ ಮಲಘಟ್ಟ ಎಂಬ ಹಳ್ಳಿಯಲ್ಲಿ ಕಳೆದ ಹಲವು ವಾರಗಳಿಂದಲೂ ಪಕ್ಕದ ಕಾಡೊಂದರಿಂದ ತೋಳವು ಬಂದು ಕುರಿ ಮಂದೆ ಮತ್ತು ನಾಯಿಗಳೊಡನೆ ಇದ್ದು ಸಂಜೆಯಾಗುತ್ತಲೇ ಕಾಡಿಗೆ ಹಿಂದಿರುಗುತ್ತಿದೆಯೆಂದು ಗೊತ್ತಾಗಿದೆ ಇದುವರೆಗೆ ತೋಳದಿಂದ ಯಾವಪ್ರಾಣಿಗೂ ಬಾಧೆಯಾಗಿಲ್ಲ

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ ಗಡಿಯಾರಗಳು ಮತ್ತು ಕನ್ನಡಕಗಳು ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ ಇಂದೇ ಭೇಟಿ ಕೊಡಿ

ಕೆ ಎಸ್ ಲಕ್ಷ್ಮಣ ಅಯ್ಯರ್ ಅಂಡ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು ಅಶೋಕ ರಸ್ತೆ ಮೈಸೂರು (Estd 1911)

Central Food Technological Research Institute, Mysore

TENDER NOTIFICATION

Sealed tenders are invited from furniture makers for "Making and Supplying laboratory furniture for the new Processing Wing of the Central Food Technological Research Institute Mysore

The detailed specifications relating to the work could be obtained from the Director Central Food Technological Research Institute Mysore during Office hours on payment of a sum of Rs 5 per set The approximate value of the work is Rs 9 000 and a tender deposit of Rs 450 has to be paid along with the tender

The tender in duplicate along with the tender deposit paid in cash or by Bank Draft at the Office of the Institute will have to be sent so as to reach the Director Central Food Technological Research Institute V V Mohalla P O Mysore before 12 Noon on Saturday 1[?]th January 1957

The tenders received will be opened by the Director Central Food Technological Research Institute, Mysore at his office on the same day at 12 30 P M in the presence of the tenderers or their representatives who may be present at the time

The final decision regarding the disposal of the tenders rests with the Council of Scientific and Industrial Research New Delhi The Director reserves the right not to accept the lowest or any of the tenders without assigning any reason therefor

A W De SOUZA
Administrative Officer

ಲಕ್ಷ್ಮಿ 2-1-57 ರಿಂದ ಅಮೋಘ ಪ್ರಾರಂಭ ಪ್ರತಿದಿನ 3 ಆಟಗಳು
ಜೆಮಿನಿ ಪ್ರಸ್ತುತಪಡಿಸುವ ಜೆಮಿನಿ ಕಲಾ ಚಿತ್ರ
ಕೆ ಬಿ ಸುಂದರಾಂಬಾಳ್ ಜೆಮಿನಿ ಗಣೇಶ್ ಎಂ ಕೆ ರಾಧಾ ಕುಮಾರಿ ಪಾತ್ರವಹಿಸಿರುವ
ಅವ್ವೆಯಾರ್
ಅತಿ ಶೀಘ್ರದಲ್ಲಿಯೇ ನಿರೀಕ್ಷಿಸಿ: (ತೆಲುಗು ಚಿತ್ರ) **ಸತಿ ಸಾವಿತ್ರಿ**

ಚಾಮುಂಡೇಶ್ವರಿ ಟಾಕೀಸ್

3 1 5 ರಿಂದ ಶಿಕ್ಷಿತರ ಜನಸ್ತೋಮಕ್ಕೆ ಪ್ರದರ್ಶಿತವಾಗುತ್ತಿರುವ 3ನೇ ವಾರ
ಆಟಗಳು — ಮ್ಯಾಟಿನಿ 2—40 1ನೇ ಆಟ 6—30 2ನೇ ಆಟ 10 ಘಂಟೆಗೆ

ಮಾದರಕುಲ ಮಾಣಿಕ್ಯಂ

ನಟವರ್ಗ — ಜೆಮಿನಿ ಗಣೇಶ್, ಸಾವಿತ್ರಿ, ನಾಗೇಶ್ವರರಾವ್, ಅಂಜಲಿದೇವಿ, ಶಾಂತಕುಮಾರಿ ಎಂ ಎನ್ ರಾಜಂ ರಂಗರಾವ್, ಕನ್ನಾಂಬ, ಸಾರಂಗಪಾಣಿ, ಫ್ರೆಂಡ್ ರಾಮಸ್ವಾಮಿ
[AN EMERALD RELEASE

ಬಿಲ್ಲಾ... ನಂ. 792

ಸಂಪುಟ ೧೫] SADHVI : THURSDAY 3—1—1957 ಮೈಸೂರು : ಗುರುವಾರ ೩—೧—೧೯೫೭ [ಸಂಚಿಕೆ : ೦೩೦

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿಯ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಕೆಮ್ಮು ರೋಗಗಳು
ವ್ಯಾಧಿಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಸಂಚಾಲಕರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71 [illegible]
ಶ್ರೀನಿವಾಸ ಬಜಾರ್ ಬೀದಿ,
ಬೆಂಗಳೂರು-2

ಅಧ್ಯಕ್ಷ ನಾಸೆರರಿಂದ ಈಜಿಪ್ಟ್-ಬ್ರಿಟನ್ ಒಪ್ಪಂದ ರದ್ದು

ಇಂದೂರು ಕಾಂಗ್ರೆಸ್ ಅಧಿವೇಶನ

ಅಖಂಡ ಜ್ಯೋತಿಯ ಮೆರವಣಿಗೆ

ಇಂದೂರಿನಲ್ಲಿ ಲಕ್ಷ್ಮೀಬಾಯಿ ನಗರದಲ್ಲಿ ಸೇರ[illegible] ೬೨ನೇ ಕಾಂಗ್ರೆಸ್ ಅಧಿವೇಶನಕ್ಕಾಗಿ [illegible] ಅಧ್ಯಕ್ಷ ಢೇಬರ್‌ರವರು ವಿಶೇಷ ರೈಲಿನಲ್ಲಿ [illegible] ಆಗಮಿಸಿದರು. ಅವರಿಗೆ ವೈಭವಪೂರಿತ [illegible] ದೊರೆಯಿತು.

ಜೋಡಿ ಎತ್ತುಗಳನ್ನು ಕಟ್ಟಿದ ವಿಶೇಷ [illegible] ಅಖಂಡ ಜ್ಯೋತಿಯ ಮೆರವಣಿ[illegible] ನಡೆಯಿತು. ಅಧ್ಯಕ್ಷ ಢೇಬರರು ಅದ[illegible] ವಹಿಸಿದ್ದರು. ದಾರಿಯ ಉದ್ದಕ್ಕೂ ಹಾ[illegible] ಅವರಿಗೆ ಅರ್ಪಿಸಲಾಯಿತು. [illegible] ಪ್ರದೇಶ ಮುಖ್ಯ ಮಂತ್ರಿ ಶುಕ್ಲರವರ ನೇ[illegible] ಅಧ್ಯಕ್ಷರ ಮೆರವಣಿಗೆಯನ್ನು ಈ ಸಾರಿ [illegible].

[illegible] ಅಗ್ರಭಾಗದಲ್ಲಿ ೧೫೦೦ ಸ್ವ[illegible] ಸೇವಕರು ಅಶ್ವಾರೋಹಿಗಳಾಗಿ ಹೊರಟ[illegible] ಭಜನೆ ಮಾಡುತ್ತ [illegible] ವೇಷ ಧರಿಸಿದ [illegible] ಮಿಲಿಟರಿ ರೀತಿಯ ವಾದ್ಯವನ್ನು [illegible] ನಡೆದರು. ಅದರಲ್ಲಿ [illegible] ಸೇರಿದ್ದರು.

[illegible] ಉದ್ದಕ್ಕೂ ತಳಿರುತೋರಣ[illegible] ಸಮಾಜಗಳನ್ನು [illegible] ನಡೆದ ಈ ಮೆರವಣಿಗೆ[illegible] ಲಕ್ಷ ಜನರು ನೋಡಿದರು.

ಅಧಿವೇಶನವು ಸೇರುವ ಸ್ಥಳದಲ್ಲಿ [illegible] ಹೆಬ್ಬಾಗಿಲಿನಲ್ಲಿ, ಝಾನ್ಸಿ ಲಕ್ಷ್ಮೀಬಾ[illegible] ಖಡ್ಗವನ್ನು ಹಿಡಿದು ಕುದುರೆಯ [illegible] ಕುಳಿತಿರುವ ಪೂರ್ಣಾಕಾರದ ವಿಗ್ರಹ [illegible] ಇಂದೂರನ್ನು ನಿರ್ಮಿ[illegible] ಮಾಡಿದ ರಾಣಿ ಅಹಲ್ಯಾಬಾಯಿ ಹೋಳ್ಕರ [illegible] ದ್ವಾರಕ್ಕೆ ಇಡಲಾಗಿದೆ. ಮತ್ತೊಂ[illegible] ಪ್ರಸಿದ್ಧ ಕ್ರಾಂತಿಕಾರರಾದ [illegible] ಹೆಸರು ಇಡಲಾಗಿದೆ. ೬೦೦ ಎಕರೆ [illegible] ಪ್ರದೇಶದ ಅಧಿವೇಶನ ಸ್ಥಳಕ್ಕೆ ಒಟ್ಟು [illegible] ಹೆಬ್ಬಾಗಿಲುಗಳಿವೆ.

ಬಹಿರಂಗ ಅಧಿವೇಶನವು ಸೇರುವ ಸ್ಥಳದಲ್ಲಿ [illegible] ಜನರು ಕೂಡಬಹುದು.

ಕಲ್ಕತ್ತದಲ್ಲಿ ಲೋಕಸಭಾ ಸದಸ್ಯನ ದಸ್ತಗಿರಿ

ಕಲ್ಕತ್ತದಲ್ಲಿ ಇತ್ತೀಚೆಗೆ ಬಟ್ಟೆ ವರ್ತಕರ [illegible] ನಡೆದ ಸಂದರ್ಭದಲ್ಲಿ ಅಂಗಡಿಗಳವರು [illegible] ಬಾಗಿಲನ್ನು ಮುಚ್ಚುವಂತೆ ಬಲವಂತಪಡಿಸಿದರೆಂ[illegible] ದನೆಗಾಗಿ ಲೋಕಸಭೆಯ ಸ್ವತಂತ್ರ ಸ[illegible] ಶ್ರೀ ಮೋಹಿತಕುಮಾರಮೈತ್ರ ಮತ್ತು [illegible] ಮಂದಿಯನ್ನು ಪೋಲೀಸರು ಬಂಧಿಸಿ[illegible] ೧೦೦೦೦ ಬಟ್ಟೆ [illegible] ಮುಚ್ಚಿವೆ. ೧೫,೦೦೦ ಬಟ್ಟೆ ವ್ಯಾ[illegible] ಮುಷ್ಕರ ನಡೆಸುತ್ತಿರುವರು. [illegible] ಲಕ್ಷ ಮಂದಿ ಕೆಲಸಕ್ಕೆ ಹೋಗಿ[illegible] ಮೂಲಸ್ಥಾನದಲ್ಲಿ ತೆಗೆ[illegible] ತಮ್ಮಿಂದ ವಸೂಲು ಮಾಡುತ್ತಿ[illegible] ಅವರು ಪ್ರತಿಭಟಿಸುತ್ತಿರುವರು.

ಸಂಸ್ಥಾನದಲ್ಲಿ ಒಂದೇ ವಿಧದ ವಿದ್ಯಾಭ್ಯಾಸ

ವ್ಯವಸ್ಥೆಗಾಗಿ ಸಮಿತಿಯೊಂದರ ರಚನೆ

ಬೆಂಗಳೂರು ೨

ಸಂಸ್ಥಾನದಲ್ಲೆಲ್ಲಾ ಒಂದೇ ರೀತಿಯ ವಿದ್ಯಾಭ್ಯಾಸದ ವಿ[illegible] ಸರ್ಕಾರದವರು ಕ್ರಮ ಕೈಗೊಂಡಿರುತ್ತಾರೆ. [illegible] ಎಲ್ಲಾ [illegible] ಹಂತಗಳಲ್ಲೂ ಅನ್ವಯಿ[illegible] ದೇಶದ ವ್ಯವಸ್ಥೆಯನ್ನು ಸೂಚಿಸುವುದಕ್ಕಾಗಿ ವಿದ್ಯಾ[illegible] ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ. ಅದರಲ್ಲಿ ಮೈಸೂರು ವಿಶ್ವ[illegible] ಕರ್ನಾಟಕ ವಿಶ್ವವಿದ್ಯಾಲಯ [illegible] ಸಂಸ್ಥಾನದ ವಿದ್ಯಾಧಿಕಾರಿ [illegible] ಶ್ರೀ [illegible] ಬೆಂಗಳೂರು [illegible] ಮಂಗಳೂರಿನ ಶ್ರೀ ಸಿ ಎ [illegible] ಕೊಡಗಿನ ಶ್ರೀ ಬಿ [illegible] ಗಳೂರು [illegible] ಮತ್ತು [illegible] ರಾಯಚೂರು [illegible] ಮತ್ತು [illegible] ಶ್ರೀ ಎಸ್ ಕೃಷ್ಣನ್ [illegible] ಸದಸ್ಯರಾಗಿರುವರು. ಶಿಕ್ಷಣ [illegible] ಸಮಿತಿ ಕಾರ್ಯದರ್ಶಿ.

ಉತ್ತರ ಕರ್ನಾಟಕದಲ್ಲಿ ಬಸ್ಸುಗಳ ರಾಷ್ಟ್ರೀಕರಣ

ಧಾರವಾಡ, ಬೆಳಗಾಂ, [illegible] ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಎಲ್ಲಾ ಬಸ್ಸುಗಳನ್ನೂ ಮೈಸೂರು ಸರ್ಕಾರದವರು ಮೊನ್ನೆ ತಮ್ಮ ವಶಕ್ಕೆ ತೆಗೆದುಕೊಂಡರು. ಈ ಸಂಬಂಧವಾಗಿ ಬೆಳಗಾಮಿನಲ್ಲಿ ಡಿವಿಜನಲ್ ಕಮೀಷನರ್ ಶ್ರೀ ಕೆ ಪಿ ರಂಗನಾಥಯ್ಯನವರ ಅಧ್ಯಕ್ಷತೆಯಲ್ಲಿ ಸಮಾರಂಭವೊಂದು ನಡೆಯಿತು. ಅಲ್ಲಿ ಒಟ್ಟು ೬೦೦ ಬಸ್ಸುಗಳನ್ನು ತೆಗೆದುಕೊಳ್ಳಲಾಗಿದೆ.

ನಗರ್ಲೀ ರೇಂಜ್ ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಘದ ವಾರ್ಷಿಕೋತ್ಸವ

ನಗರ್ಲೀ ರೇಂಜಿನ ಪ್ರಾಥಮಿಕ ಶಾಲಾ ಅಧ್ಯಾಪಕರುಗಳ ಸಂಘದ ವಾರ್ಷಿಕೋತ್ಸವವು ನಾಳಿದ್ದು ಸಂಜೆ ೫ ಗಂಟೆಗೆ ನಂಜನಗೂಡಿನ [illegible] ಭವನದಲ್ಲಿ ನಡೆಯಲಿದೆ. ಮೈಸೂರಿನ ಡಿ ಡಿ ಪಿ ಐ ಯವರಾದ ಶ್ರೀ ಟಿ ವಾಸುದೇವಯ್ಯನವರು ಅಧ್ಯಕ್ಷತೆ ವಹಿಸುವರು. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಹೆಚ್ ಎ ಶ್ರೀರಂಗ ರಾಜುರವರು ಭಾಷಣ ಮಾಡುವರು.

ವಿಶ್ವವಿದ್ಯಾಲಯದ ಸಿಂಡಿಕೇಟಿಗೆ ನಾಮಕರಣ

ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟಿನ ಸದಸ್ಯರನ್ನು ಚಾನ್ಸಲರರು ಈ ರೀತಿ ನಾಮಕರಣ ಮಾಡಿರುತ್ತಾರೆ. ನೆನ್ನೆಯಿಂದ ಇದು ಜಾರಿಗೆ ಬರುವುದು:—ಮೈಸೂರು ವಿಶ್ವವಿದ್ಯಾಲಯದ ವೈಸ್ ಛಾನ್ಸಲರ್, ವಿದ್ಯಾಧಿಕಾರಿಗಳು, [illegible] ಸೆಂಟ್ರಲ್ ಬಿ ಎಂ ಎಸ್ [illegible] ಮತ್ತು ಮೈಸೂರು ಮೆಡಿಕಲ್ ಕಾಲೇಜು ಪ್ರಿನ್ಸಿಪಲರುಗಳು, ಶ್ರೀಗಳಾದ ಎಲ್ ಸಿದ್ದಪ್ಪ, ಮಾಜಿ ಮಂತ್ರಿ ಮಹದೇವ[illegible] ಡಾ|| ನಂಗನಗೌಡ, ಎಂ ಪಿ ಎಲ್

ಬ್ರಿಟನ್ನಿನೊಡನೆ ಈಜಿಪ್ಟ್ ಒಪ್ಪಂದದ ರದ್ದು

ಸೂಯೆಜ್ಜಿಗೆ ಬ್ರಿಟಿಷ್ ಸೈನ್ಯ ಬರಲು ಅವಕಾಶವಿಲ್ಲ

ಈಜಿಪ್ಟ್ [illegible] ವರ್ಷಗಳ ಹಿಂದೆ ಬ್ರಿಟನ್ನಿನೊಡ[illegible] ಮಾಡಿಕೊಂಡಿದ್ದ ಒಪ್ಪಂದವನ್ನು ಅಧ್ಯಕ್ಷ ನಾಸೆರ್‌ರವರು ನೆನ್ನೆ ರದ್ದುಗೊಳಿಸಿದರು. ಹಲವು ತುರ್ತು ಸಂದರ್ಭಗಳಲ್ಲಿ ಸೂಯೆಜ್ ಕಾಲುವೆ ಪ್ರದೇಶಕ್ಕೆ ಬ್ರಿಟಿಷ್ ಸೈನ್ಯಗಳನ್ನು ಕಳುಹಿಸಲು ಒಪ್ಪಂದದ ಪ್ರಕಾರ ಅವಕಾಶವಿದ್ದಿತು. ಬ್ರಿಟನ್ನು ಈಜಿಪ್ಟಿನ ಮೇಲೆ ಧಾಳಿ ನಡೆಸಿದ ಮೇಲೆ ಈ ಒಪ್ಪಂದವು ನಿರರ್ಥಕವಾಗಿದೆಯೆಂದು ನಾಸೆರ್‌ರವರು ತಿಳಿಸಿರುತ್ತಾರೆ. ಈ ಒಪ್ಪಂದವನ್ನು ಏಕಮುಖವಾಗಿ ತಿರಸ್ಕರಿಸುವ ಹಕ್ಕು ಈಜಿಪ್ಟಿಗೆ ಇರುವುದಿಲ್ಲವೆಂದು ಬ್ರಿಟನ್ನಿನ ವಿದೇಶಾಂಗ [illegible] ವಕ್ತಾರರು ಹೇಳಿರುವರು.

ಕಾಶ್ಮೀರದ ಬಗ್ಗೆ ಪಾಕಿಸ್ತಾನದ ವಿದೇಶಾಂಗ ಮಂತ್ರಿಯ ಬೆದರಿಕೆ

ನಿರಾಶ್ರಿತರು ಅಲ್ಲಿಗೆ ನುಗ್ಗಿ ಚಳುವಳಿ ನಡೆಸುವ ಸೂಚನೆ

ಕಾಶ್ಮೀರದ ಪ್ರಶ್ನೆಯನ್ನು ಭದ್ರತಾ ಸಮಿತಿಯು ಒಡನೆ ಪರಿಶೀಲಿಸಬೇಕೆಂದು ಪಾಕಿಸ್ತಾನದ ವಿದೇಶಾಂಗ ಮಂತ್ರಿ ಫಿರೋಜ್ ಖಾನ್ ನೂನರು ನೆನ್ನೆ ಸಮಿತಿ ಅಧ್ಯಕ್ಷರಿಗೆ ಪತ್ರ ಬರೆದು, ಈ ವಿಚಾರವಾಗಿ ಗುಪ್ತಾಲೋಚನೆ [illegible] ಲಕ್ಷಾಂತರ ಕಾಶ್ಮೀರಿ ನಿರಾಶ್ರಿತರಲ್ಲಿ ಅ[illegible] ಮೂಡಿರುವುದೆಂದೂ ಸೂಚಿಸಿದರು. ಕಾಶ್ಮೀರದಲ್ಲಿ ಜನಮತಗಣನೆಯನ್ನು ನೆಹರೂರವರು ವಿರೋಧಿಸುವುದನ್ನೂ ಕಾಶ್ಮೀರವನ್ನು ಭಾರತದಲ್ಲಿ ಐಕ್ಯಗೊಳಿಸಲು [illegible] ಕ್ರಮ ಕೈಗೊಳ್ಳುತ್ತಿರುವುದನ್ನೂ ಸಮಿತಿಯ ಗಮನಕ್ಕೆ ತಂದು ಈ ವಿಚಾರವನ್ನು ಇತ್ಯರ್ಥಪಡಿಸದಿದ್ದರೆ ಭಯಂಕರ ಪರಿಣಾಮವುಂಟಾಗುವುದೆಂದು ಹೇಳಿರುವರು.

ಕಾಶ್ಮೀರದ ನಿರಾಶ್ರಿತರು ತಮ್ಮ ಹಕ್ಕು ಸಾಧನೆಗಾಗಿ ಕಾಲ ವಿಳಂಬವಿಲ್ಲದೆ ಸಂಸ್ಥಾನಕ್ಕೆ ಹಿಂದಿರುಗಲು ಇಚ್ಛಿಸುತ್ತಿರುವರೆಂದೂ ಸೀಸ್‌ಫೈರ್ ರೇಖೆಯನ್ನು ದಾಟಿ ಕಾಶ್ಮೀರದೊಳಗೆ ಪ್ರವೇಶಿಸಿ, ಕಾಶ್ಮೀರಿಗಳ ಸ್ವಯಂ ನಿರ್ಣಯಾಧಿಕಾರವನ್ನು ಪಡೆದುಕೊಳ್ಳಲು ಸಾಮೂಹಿಕ ಶಾಂತಿಯುತ ಚಳುವಳಿಯನ್ನು ನಡೆಸಲು ಆಲೋಚಿಸುತ್ತಿರುವರೆಂದೂ ನೂನರು ತಿಳಿಸಿರುತ್ತಾರೆ.

ಪೂರ್ವ ಪ್ರಷ್ಯದಲ್ಲೂ ಕಮ್ಯೂನಿಸ್ಟರ ವಿರುದ್ಧದ ಗಲಭೆ

ಪೋಲೆಂಡು ಆಡಳಿತ ನಡೆಸುತ್ತಿರುವ ಪೂರ್ವ ಪ್ರಷ್ಯದ ಭಾಗದಲ್ಲಿ ಕಮ್ಯೂನಿಸ್ಟರ ವಿರೋಧದ ಪ್ರದರ್ಶನಗಳು ಆಗುತ್ತಿವೆಯೆಂದು ವರದಿಯಾಗಿದೆ. ಕ್ಷುಬ್ಧ ತನಗಳ [illegible] ನಡೆಸುವುದಾಗಿ ಹೇಳಲಾಗಿದೆ.

[illegible] ಕೆ ವಿ ಶಂಕರೇಗೌಡ, ಓ ವೀರಬಸಪ್ಪ, ವಿ ರಾಜಪ್ಪ ಮತ್ತು ಎಚ್ ಶಿವಪ್ಪ [illegible] ನೂತನ ಶಾಸನದ ಪ್ರಕಾರ ಸಿಂಡಿಕೇಟಿಗೆ ಚುನಾವಣೆಗಳು ಮುಂದೆ ನಡೆಯಲಿವೆ.

ಕಾರು-ಲಾರಿ ಡಿಕ್ಕಿಯಲ್ಲಿ ನಿಜಲಿಂಗಪ್ಪನವರಿಗೆ ಗಾಯ

ಇಂದೂರಿನ ಪ್ರಯಾಣದ ರದ್ದು

ಸ್ವಂ ಸು ತಂತಿ] ಬೆಂಗಳೂರು ೨

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಇಂದೂರು ಕಾಂಗ್ರೆಸ್ ಅಧಿವೇಶನಕ್ಕಾಗಿ ಹೊರಡಲು ಮೋಟಾರಿನಲ್ಲಿ ವಿಮಾನ ನಿಲ್ದಾಣಕ್ಕೆ [illegible] ತೆರಳುತ್ತಿದ್ದಾಗ ದಾರಿಯಲ್ಲಿ ಲಾರಿಯೊಂದು ಡಿಕ್ಕಿ ಹೊಡೆದು ಅವರ ಕಾರಿಗೂ ಡಿಕ್ಕಿಯಾಗಿ ಶ್ರೀ ನಿಜಲಿಂಗಪ್ಪ, ಅವರ ಅಳಿಯ ಶ್ರೀ ಪರಮೇಶ್ವರಪ್ಪ, ಗುನ್ನಪ್ಪ ಹಳ್ಳಿಕೇರಿ ಮತ್ತು ಚೌಡಪ್ಪ ಕಿಡ್ಡಿಯವರುಗಳಿಗೆ ಅಲ್ಪಸ್ವಲ್ಪ ಗಾಯವಾಯಿತು.

ಎಲ್ಲರಿಗೂ ಚಿಕಿತ್ಸೆ ನಡೆಸಲಾಯಿತು. ನಿಜಲಿಂಗಪ್ಪನವರ ತಲೆಗೆ ಪೆಟ್ಟು ಬಿದ್ದಿದೆ.

ಶ್ರೀಗಳಾದ ವಿ ವೆಂಕಟಪ್ಪನವರೂ ಮತ್ತು ಎಸ್ ಚೆನ್ನಯ್ಯನವರೂ ಇಂದೂರಿಗೆ ಪ್ರಯಾಣ ಬೆಳೆಸಿದರು. ಶ್ರೀ ನಿಜಲಿಂಗಪ್ಪನವರ ಪ್ರಯಾಣ ರದ್ದಾಯಿತು.

ನೂತನ ವೇತನದ ದರ್ಜೆಯಿಂದ ಹೊಸಬರಿಗೆ ಅನುಕೂಲ

ನಾನ್ ಗೆಜೆಟೆಡ್ ನೌಕರರಲ್ಲಿ ಅತೃಪ್ತಿ

ಬೆಂಗಳೂರು ೨

ಸರ್ಕಾರದವರು ಮೊನ್ನೆ ಹೊರಡಿಸಿದ ಸಂಬಳದ ಪುನರ್ವಿಮರ್ಶೆ ಆಜ್ಞೆಯಿಂದ ಹೊಸದಾಗಿ ಕೆಲಸಕ್ಕೆ ಸೇರುವವರು ಮತ್ತು ನಿವೃತ್ತರಾಗಲಿರುವ ಹಲವರಿಗೆ ಮಾತ್ರ ಅನುಕೂಲವಾಗಿದೆಯೆಂದೂ ಸೇವೆಯ ಮಧ್ಯಕಾಲದಲ್ಲಿರುವ ಖಾಯಂ ನೌಕರರಿಗೆ ತೀರಾ ನಿರಾಶೆಯಾಗಿದೆಯೆಂದೂ ನಾನ್ ಗೆಜೆಟೆಡ್ ನೌಕರರ ಸಂಘದವರು ಹೇಳಿಕೆಯೊಂದರಲ್ಲಿ ತಿಳಿಸಿರುತ್ತಾರೆ. ಹಲವು ವಿದ್ಯಮಾನಗಳಲ್ಲಿ ನೌಕರರು ತಮ್ಮ ತಾತ್ಕಾಲಿಕ ಪರಿಹಾರಕ್ಕಿಂತಲೂ ಕಡಿಮೆ ಪಡೆಯಬೇಕಾಗುವುದೆಂದೂ ಸೂಚಿಸಲಾಗಿದೆ. ಕೆಲವರಿಗೆ ತಾತ್ಕಾಲಿಕ ಪರಿಹಾರದ ಮೊತ್ತದ ಮೇಲೆ ಹಲವು ಆಣೆಗಳು ಲಭ್ಯವಾಗುವುವೆಂದು ತಿಳಿಸಲಾಗಿದೆ. ಸಂಬಳದ ಕನಿಷ್ಠ ದರ್ಜೆಯನ್ನು ಹೆಚ್ಚಿಸುವುದನ್ನು ಸ್ವಾಗತಿಸಲಾಗಿದೆ.

ಅಂಚೆ ಮತ್ತು ತಂತಿ ನೌಕರರಿಂದ ಸಂಬಳದ ನಿರಾಕರಣೆ

ಮೈಸೂರು ೨

ಎರಡನೇ ಸಂಬಳ ಸಮಿತಿಯನ್ನು ರಚಿಸದಿರುವುದಕ್ಕಾಗಿಯೂ ಮತ್ತು ಹೆಚ್ಚು ತುಟ್ಟಿಭತ್ಯ ಕೊಡುವಂತೆ ಒತ್ತಾಯಪಡಿಸಲೂ ನೆನ್ನೆ ನಗರದ ಅಂಚೆ ಮತ್ತು ತಂತಿ ನೌಕರರು ಸಂಬಳವನ್ನು ಸ್ವೀಕರಿಸದೆ ಪ್ರತಿಭಟನೆಯನ್ನು ಸೂಚಿಸಿದರು. ಟೆಲಿಫೋನ್ ಎಕ್ಸ್‌ಚೇಂಜ್ ಆವರಣದಲ್ಲಿ ಸಂಬಳದ ಮುಷ್ಕರ ದಿನಾಚರಣೆಯನ್ನು ನಡೆಸಲಾಯಿತು. ಶ್ರೀ ಬಿ ಕೆ ರಾಮಸಿಂಹರವರು ಅಧ್ಯಕ್ಷತೆ ವಹಿಸಿದ್ದರು.

ಅಂಚೆ ಮತ್ತು ತಂತಿ ನೌಕರರ ಅಖಿಲ ಭಾರತ ಸಂಘದ ನೀತಿಗೆ ಸ್ವತಂತ್ರವಾಗಿ ಬೆಂಬಲ ಸೂಚಿಸಿ, ಸಂಘವು ಕೊಡುವ ಆಜ್ಞೆಗಳನ್ನು ಪಾಲಿಸುವ ಬಗ್ಗೆ ನೌಕರರು ಪ್ರತಿಜ್ಞೆ ಕೊಡುವರೆಂದು ತಿಳಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಜಿಲ್ಲೆಯ ಚುನಾವಣಾ ಕ್ಷೇತ್ರಗಳು

ಬೆಂಗಳೂರು ೨

ಮೈಸೂರು ಶಾಸನ ಸಭೆಯ ಚುನಾವಣಾ ಕ್ಷೇತ್ರಗಳನ್ನು ಜಿಲ್ಲೆಯಲ್ಲೂ ಮತ್ತು ಇತರ ಕಡೆ ಈ ರೀತಿ ವಿಂಗಡಿಸಲಾಗಿದೆ —

ನಂಜನಗೂಡು ಕ್ಷೇತ್ರ— ನಂಜನಗೂಡು ಮತ್ತು ಹುಲ್ಲಹಳ್ಳಿ ಹೋಬಳಿಗಳು ಚಿಕ್ಕಯ್ಯನ ಛತ್ರದ ಹೋಬಳಿಯ ಹಲವು ಹಳ್ಳಿಗಳು ಬಿಳಿಗಿರಿ ಕ್ಷೇತ್ರ—ಬಿಳಿಗೆರೆ ಮತ್ತು ದೊಡ್ಡ ಕವಲಂದೆ ಹೋಬಳಿಗಳು ಮತ್ತು ಚಿಕ್ಕಯ್ಯನ ಛತ್ರದ ಹೋಬಳಿಯ ಇತರ ಹಳ್ಳಿಗಳು

ಚಾಮರಾಜನಗರ ಕ್ಷೇತ್ರ— ಚಾಮರಾಜನಗರ ತಾಲ್ಲೂಕು ಪೂರ್ಣವಾಗಿ

ಗುಂಡ್ಲುಪೇಟೆ ಕ್ಷೇತ್ರ— ತಾಲ್ಲೂಕು ಪೂರ್ತಿ

ಹುಣಸೂರು ಕ್ಷೇತ್ರ— ಹುಣಸೂರು ಮತ್ತು ಹೆಗ್ಗಡದೇವನ ಕೋಟೆ ತಾಲ್ಲೂಕುಗಳು, ಪಿರಿಯಾಪಟ್ಟಣ ತಾಲ್ಲೂಕಿನ [illegible] ಹೋಬಳಿ ಮತ್ತು ಬೆಟ್ಟದಪುರ ಹೋಬಳಿಯ [illegible] ಕೃಷ್ಣರಾಜನಗರ ಕ್ಷೇತ್ರ— [illegible] ಬಿಟ್ಟು ಮಿಕ್ಕ ತಾಲ್ಲೂಕು ಪಿರಿಯಾಪಟ್ಟಣ ಕ್ಷೇತ್ರ [illegible] ಹೋಬಳಿ ಬಿಟ್ಟು ಮಿಕ್ಕ ತಾಲ್ಲೂಕು [illegible] ತಾಲ್ಲೂಕಿನ [illegible] ಮತ್ತು [illegible] ಹೋಬಳಿ

ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ [illegible] ಹೋಬಳಿ ಬಿಟ್ಟು ಕೃಷ್ಣರಾಜಪೇಟೆ ತಾಲ್ಲೂಕು ಪಾಂಡವಪುರ—[illegible] ಹೋಬಳಿ ಮತ್ತು ಪಾಂಡವಪುರ ತಾಲ್ಲೂಕು ಶ್ರೀರಂಗಪಟ್ಟಣ ಕ್ಷೇತ್ರ— [illegible] ಹೋಬಳಿ ಮತ್ತು ಶ್ರೀರಂಗಪಟ್ಟಣ ತಾಲ್ಲೂಕು ಮತ್ತು [illegible] ಹೋಬಳಿ ಬಿಟ್ಟು [illegible] ತಾಲ್ಲೂಕು [illegible] ಚಿಕ್ಕರಸಿನಕೆರೆ ಹೋಬಳಿ ಮತ್ತು [illegible] ತಾಲ್ಲೂಕು ಮದ್ದೂರು ಚಿಕ್ಕರಸಿನಕೆರೆ ಹೋಬಳಿ ಬಿಟ್ಟು ಉಳಿದ ತಾಲ್ಲೂಕು ಮತ್ತು ನಾಗಮಂಗಲ ತಾಲ್ಲೂಕಿನ ದೇವಲಾಪುರ [illegible] ನಾಗಮಂಗಲ ದೇವಲಾಪುರ [illegible] ಬಿಟ್ಟು ಉಳಿದ ತಾಲ್ಲೂಕು

ಸಂಸ್ಥಾನದಲ್ಲಿ ಒಟ್ಟು [illegible] ಚುನಾವಣಾ ಸ್ಥಾನಗಳಿವೆ [illegible]

ಸಾರ್ ಪ್ರದೇಶ ಪುನಃ ಜರ್ಮನಿಗೆ

ಯೂರೋಪಿನ ಅಂತರರಾಷ್ಟ್ರೀಯ ವ್ಯವಹಾರಗಳ ಪೈಕಿ ಅತ್ಯಂತ ಕಷ್ಟ ಪ್ರಸಂಗಗಳನ್ನುಂಟು ಮಾಡಿದ ಪ್ರಶ್ನೆಗಳಲ್ಲಿ ಒಂದಾದ ಸಾರ್ ಪ್ರದೇಶದ ಅಧಿಕಾರದ ವಿಚಾರವು ನೆನ್ನೆ ಕೊನೆಗೊಂಡಿತು ಆ ಪ್ರದೇಶವನ್ನು ಫ್ರಾನ್ಸ್ ಜರ್ಮನಿಗೆ ಒಪ್ಪಿಸಿತು ಈ ಬಗ್ಗೆ ಸಂತೋಷ ಸೂಚಿಸಲು ಅಲ್ಲಿ ಚರ್ಚ್ ಗಂಟೆಗಳನ್ನು ಬಾರಿಸಲಾಯಿತು ಸೈರನ್ನುಗಳು ಕೂಗಿದವು ಮತ್ತು ಬಾಣಬಿರುಸುಗಳನ್ನು ಹಾರಿಸಲಾಯಿತು

ಕಳ್ಳ ಮತದಾನ ತಪ್ಪಿಸಲು ಹೊಸ ಕ್ರಮ

ಬರುವ ಮಹಾ ಚುನಾವಣೆಗಳಲ್ಲಿ ಕಳ್ಳ ಮತದಾನಗಳಾಗುವುದನ್ನು ತಪ್ಪಿಸಲು ಭಾರತದ ಮುಖ್ಯ ಚುನಾವಣಾ ಕಮಿಷನರರು ಹೊಸ ಸೂಚನೆಗಳನ್ನು ಕೊಡಲಿದ್ದಾರೆ ಪ್ರತಿ ಓಟರ್ ನ್ಯಾಯವಾಗಿ ಮತದಾನ ಕೊಡತಕ್ಕವನೇ ಎಂಬುದನ್ನು ಪೋಲಿಂಗ್ ಬೂತುಗಳಲ್ಲಿ ಪರೀಕ್ಷೆಯಾಗುವುದು ಓಟು ಚೀಟಿ ಕೊಡುವ ಮುಂಚೆ ಓಟುದಾರನ ಬಲ ಅಥವಾ ಎಡ ಹೆಬ್ಬೆರಳಿನ ಗುರುತನ್ನು ತೆಗೆದುಕೊಳ್ಳಲಾಗುವುದೆಂದೂ ಇದರಿಂದ ಅಕ್ರಮಗಳು ತಪ್ಪಲು ಸಾಧ್ಯವೆಂದೂ ಹೇಳಲಾಗಿದೆ

ಆರತಕ್ಷತೆ

ನಗರದ [illegible] ಯಲ್ಲಿರುವ ಪ್ರಕಾಶ್ [illegible] ಶ್ರೀ ಸಿ ವೆಂಕಟರಾಯರು [illegible] ಶ್ರೀ ಸಿ ಲಕ್ಷ್ಮಣರಾಯರಿಗೆ ಬೆಂಗಳೂರು [illegible] ವರ್ತಕರಾದ ಶ್ರೀ ಬಿ [illegible] ಮಗಳು ಸೌ॥ [illegible] ವಿವಾಹ ನಡೆಸಿದ ಸಂದರ್ಭದಲ್ಲಿ ಕಳೆದ ಭಾನುವಾರ ನಗರದಲ್ಲಿ ಆರತಕ್ಷತೆಯನ್ನು ಏರ್ಪಡಿಸಿದ್ದರು

ಕಾಂಗ್ರೆಸ್ ಉಮೇದುವಾರರ ವಿರುದ್ಧ ಸಂಸ್ಥೆ ಸದಸ್ಯರ ಸ್ಪರ್ಧೆ

ಬಿಹಾರಿನ ೧೭ ಜಿಲ್ಲೆಗಳ ಸುಮಾರು ೧,೦೦೦ ಮಂದಿ ಕಾಂಗ್ರೆಸ್ [illegible] ಸಭೆಸೇರಿ ಬರುವ ಮಹಾ ಚುನಾವಣೆ ಸಮಯದಲ್ಲಿ ಕಾಂಗ್ರೆಸ್ಸಿನ ಅಧಿಕೃತ ಉಮೇದುವಾರರ ವಿರುದ್ಧವಾಗಿ [illegible] ಗಳನ್ನು ನಿಲ್ಲಿಸಬೇಕೆಂದು ನಿರ್ಧರಿಸಿದರು ಅದಕ್ಕಾಗಿ ಜೆ ಎನ್ ಸಿಂಗ್ ಎಂಬ ಶಾಸನಸಭಾ ಸದಸ್ಯರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಯಿತು ಕಾಂಗ್ರೆಸ್ಸಿನಲ್ಲಿರುವ ಲಂಚಕೋರತನ ಸರ್ವಾಧಿಕಾರತ್ವ ಮುಂತಾದುವನ್ನು ಎದುರಿಸಲು ಈ ರೀತಿ ನಿರ್ಧಾರ ಕೈಗೊಳ್ಳಲಾಗಿದೆ

ಸ್ವತಂತ್ರ ಚುನಾವಣೆಗಳಿಗಾಗಿ ಜನಸಂಘದ ಕರೆ

ಭಾರತೀಯ ಜನ ಸಂಘದ ಐದನೇ ವಾರ್ಷಿಕಾಧಿವೇಶನವು ಕಳೆದ ವಾರ [illegible] ಆರಂಭವಾಗಿ [illegible] ದೇಶದಲ್ಲಿ ಸ್ವತಂತ್ರ ಮತ್ತು ನ್ಯಾಯವಾದ ಚುನಾವಣೆಗಳನ್ನು ನಡೆಸಬೇಕೆಂದು ಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು [illegible] ಐಕ್ಯತೆಯನ್ನು ಬೆಳೆಸಲು ಒಂದೇ ಸಂಸ್ಕೃತಿಯನ್ನು ಜಾರಿಗೆ ತರಲು ಕ್ರಮ ಕೈಗೊಳ್ಳಬೇಕೆಂದು ಸೂಚಿಸಲಾಯಿತು ಸಂಸ್ಕೃತ ಭಾಷೆಯನ್ನು ಅಭ್ಯಸಿಸುವಂತಾಗಬೇಕೆಂದು ತಿಳಿಸಲಾಯಿತು ಸ್ಥಳ [illegible] ಸನ್ನಿವೇಶಕ್ಕೆ ತಕ್ಕಂತೆ ಚುನಾವಣಾ ಸಖ್ಯಗಳನ್ನು ಬೆಳೆಸಬಹುದೆಂದ ಅಭಿಪ್ರಾಯ ಪಡಯಲಾಯಿತು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ಕ್ಲಾರಿಯೊನೆಟ್ [illegible] ಆರ್ ಲೀಲಾ ಗೀತಾವಳಿ [illegible] ಹಿಂದಿ ವಾರ್ತೆ [illegible] ಉದಯ ಸಂಗೀತ ಮಧ್ಯಾಹ್ನ [illegible] ಕನ್ಯಾಸ್ವಾಮಿನ ಧರ್ಮ ಸಂಗೀತ [illegible] ವಾದ್ಯ ವೃಂದ [illegible] ವನಿತಾವಿಭಾಗ [illegible] ಕ್ಲಾರಿಯೊನೆಟ್ [illegible] ಗಾಯನ ಸಂಗೀತ [illegible] ಸಂಗೀತ ಕಛೇರಿ [illegible] ಸಂಗೀತ [illegible] ನೃತ್ಯ ಸಂಗೀತ [illegible] ರೇಡಿಯೊ ಸಂದರ್ಶನ ಪರಿಚಯ ಪ್ರಸಂಗ ಮದ್ರಾಸಿನಿಂದ ದ್ವಾರಂ ನರಸಿಂಹರಾವ್ ಪಿಟೀಲು [illegible] ದೆಹಲಿಯಿಂದ [illegible] ಮದ್ರಾಸು [illegible] ಸಂಧ್ಯಾ—ನಾಟಕ ಗೀತೆ [illegible] ತರಂಗ [illegible] ಚಿತ್ರ ಸಂಗೀತ [illegible] ಉದಯ ಗೀತೆ

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಮತ್ತು

ಹೊಯ್ಸಳ ಸಣ್ಣ	೩೭ ೧೨ ೦	೩೯ ೧೨ ೦
ರಸ್ತಾಳಿ	೨೩ ೪ ೦	೨೮ ೮ ೮
ಕೆಂಬತ್ತ	೨೭ ೮ ೦	೨೭ ೧೦ ೦
ರಾಗಿ	೨೭ ೧೨ ೦	
ರಾಗಿ	೨೭ ೨ ೦	೪೪ ೨ ೮
ಜೋಳ	೪೧ ೧೪ ೦	೪೪ ೧೨ ೦
ತೆಂಗಿನಕಾಯಿ	೧೭ ೦ ೦	೨೭ ೬ ೦
ಹುಚ್ಚೆಳ್ಳು	೪೦ ೧೪ ೦	೪೫ ೦ ೦
ಹರಳುಬೀಜ	೪೫ ೦ ೦	೪೫ ೧೨ ೦
ಹುರುಳಿ	೨೪ ೦	೨೫ ೧೨ ೦
ಕಡಲೆಬೇಳೆ	೪೩ ೨ ೦	೫೫ ೦ ೦
ಹೆಸರು	೪೫ ೪ ೦	೫೩ ೦ ೦
ತೊಗರಿ	೪೬ ೦	
ಉದ್ದು	೬೨ ೨ ೦	
ಅವರೆ	೪೫ ೨ ೦	
ಕಡಲೆಕಾಯಿ ಬೀಜ	೪೫ ೨ ೦	೪೭ ೧೨ ೦
ಧನಿಯ	೨೫ ೦ ೦	೨೬ ೬ ೦
ಮೆಣಸಿನಕಾಯಿ	೯ ೮ ೦	೨೧ ೦ ೦
ಹುಣಸೇಹಣ್ಣು	೩ ೧ ೦	೪ ೧೪ ೦
ಕಡಲೆಕಾಯಿ	೮ ೦ ೦	

ಅಪ್ಪಟವಾದ

ಹಸುವಿನ ಹಾಲು

ದರ ಪೌಂಡು 1ಕ್ಕೆ 0 3-6

1/2 ಪೌಂಡಿಗೆ 0 1-9

ನಮ್ಮ ಏಜಂಟರಿಗೇ ಪಡೆದುಕೊಳ್ಳಲಾಗುತ್ತಿ [illegible]

ಗೋಕುಲ ಡೈರಿ ಫಾರಂ,

(ಬ್ರಾಂಚ್) ಅಂಬಳೆ ಅಣ್ಣಯ್ಯ ಪಂಡಿತರ ಛತ್ರದ ಹಿಂಭಾಗ

ನೂರಡಿ ರಸ್ತೆ ಮೈಸೂರು

ಪೌರಸಭಾಧಿವೇಶನ

ನಂಜನಗೂಡು ೩

ಇಲ್ಲಿನ ಪುರಸಭೆಯು ಕಳೆದ ೩೧ ನೇ ತಾರೀಕು ಶ್ರೀ ಕೆ ವೆಂಕಟಸುಬ್ಬರವರ ಅಧ್ಯಕ್ಷತೆಯಲ್ಲಿ ನಡೆಯಿತು ಟೌನ್ನಲ್ಲಿ ಮೈಸೂರು ಬ್ಯಾಂಕಿನ ಶಾಖೆಯೊಂದನ್ನು ಏರ್ಪಡಿಸುವಂತಾಗಬೇಕೆಂದು ಶ್ರೀ ಬಿ ವಿ ಬಾಲಸುಬ್ರಹ್ಮಣ್ಯಂರವರು ಕೋರಿದರು

ಇಲ್ಲಿನ ಅಂಚೆ ಕಛೇರಿಯಲ್ಲಿ ಭಾನುವಾರದ ಎಕ್ಸ್‌ಪ್ರೆಸ್ ಡೆಲಿವರಿ ಮತ್ತು ಕ್ಲಿಯರೆನ್ಸ್ ಅನ್ನು ಏರ್ಪಡಿಸುವಂತೆ ಇಲಾಖೆಯವರನ್ನು ಪ್ರಾರ್ಥಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ದನಗಳ ಜಾತ್ರೆಯನ್ನು ನಡೆಸಲು ೫೦೦ ರೂ ಗಳನ್ನೂ ಸೊಳ್ಳೆ ಕಾಟ ತಪ್ಪಿಸಲು ೫೦೦ ರೂ ಅನ್ನೂ ಮಂಜೂರು ಮಾಡಲಾಯಿತು

ಟೌನಿನಲ್ಲಿ ಕ್ರೀಡಾಂಗಣವನ್ನು ಏರ್ಪಡಿಸುವಂತೆ ಆಗಬೇಕೆಂದು ಶ್ರೀ ಎಲ್ ನಾಗಪ್ಪನವರು ಸಲಹೆ ಮಾಡಿದರು

ಹಂಗೆರಿಗೆ ಚೌರವರ ಭೇಟಿ

ರಷ್ಯ ಪೋಲೆಂಡ್ ಮತ್ತು ಅಫ್ಘಾನಿಸ್ತಾನಗಳಿಗೆ ಭೇಟಿ ಕೊಡಲಿರುವ ಚೀಣದ ಪ್ರಧಾನಿ ಚೌ ಎನ್ ಲೈಯವರು ಹಂಗೆರಿಗೂ ಹೋಗಬಹುದೆಂದು ಹೇಳಲಾಗಿದೆ ಹಂಗೆರಿಯಲ್ಲಿ ವಿರಸ ಪರಿಸ್ಥಿತಿಯನ್ನು ಕೊನೆಗಾಣಿಸಲು ಅಲ್ಲಿಗೆ ಚೌರವರ ಭೇಟಿಯು ಸಾಧ್ಯವಾಗುವುದೆಂದು ನೆಹರೂರವರು ನಂಬಿರುತ್ತಾರೆಂದು ಹೇಳಲಾಗಿದೆ ಚೌರವರು ಪುನಃ ಭಾರತಕ್ಕೆ ಬರಲಿರುವರು

○ ಪುದುಚೇರಿಯಲ್ಲಿ ಇತ್ತೀಚೆಗೆ ಒಬ್ಬ ಮಹಿಳೆಯು ಏಕಕಾಲದಲ್ಲಿ ಹಡೆದ ಐದು ಮಕ್ಕಳ ಪೈಕಿ [illegible] ತಪಟ್ಟವು ಇನ್ನೊಂದು ಆಸ್ಪತ್ರೆಯಲ್ಲಿದೆ

WANTED

A young hand with under-graduate and Senior Grade Typewriting qualifications Apply to —

Mangalore Ganesha Beedi Works,

Santhepet, Mysore

Edited Printed and Published by A R Nagarajan at Sadhvi Press D Subbiah Road Mysore

ಚೀಣಾ ಪ್ರಧಾನಿ ಚೌ ಎನ್ [illegible] ಯವರು ಸ್ವದೇಶಕ್ಕೆ ವಾಪ[illegible]

ಚೀಣದ ಪ್ರಧಾನಿ ಚೌ ಎನ್ ಲೈಯವ[illegible] ರತ ಮತ್ತು ಇತರ ದಕ್ಷಿಣ ಏಷ್ಯಾ ರಾಷ್ಟ್ರ[illegible] ತಮ್ಮ ಪ್ರವಾಸವನ್ನು ಮುಗಿಸಿಕೊಂಡು [illegible] ಪೀಕಿಂಗಿಗೆ ತೆರಳಿದರು ಪ್ರಧಾನಿ ನೆಹ[illegible] ರೊಡನೆ ಅವರು ಭಕ್ರಾ-ನಾಂಗಲ್ ಯೋ[illegible] ಸ್ಥಳಕ್ಕೆ ಭೇಟಿಯಿತ್ತರು. ಅದು ಭಾರ[illegible] ತ್ಯಂತ ದೊಡ್ಡ ಯೋಜನೆಯಾಗುವುದಲ್ಲ[illegible] ವಿಖ್ಯಾತವೂ ಆಗುವುದೆಂದು ಅವರು [illegible] ಅಲ್ಲಿಗೆ ತಮ್ಮ ಭೇಟಿಯು ಬಹಳ ಉಪ[illegible] ವಾಗಿದ್ದಿತೆಂದೂ, ಅದರಿಂದ ಅನೇಕ ವಿಷ[illegible] ವನ್ನು ಅರಿಯಬಹುದೆಂದೂ ತಿಳಿಸಿದರು [illegible] ಮತ್ತು ಚೀಣಗಳು ವಿಶ್ವ ಶಾಂತಿ ಮತ್ತು [illegible] ದಗಳ ಸಲುವಾಗಿ ಜಂಟಿ ಶ್ರಮ ಜ[illegible] ದೆಂದೂ, ಉಭಯ ರಾಷ್ಟ್ರಗಳ ನಡುವೆ [illegible] ಯಾವ ತಿಕ್ಕಾಟವೂ ಬರುವುದಿಲ್ಲವೆಂದು [illegible] ಭರವಸೆ ಕೊಡುತ್ತೇನೆಂದೂ ಅವರು [illegible] ದರು

ರಣಜಿತ್ ಟಾಕೀ[illegible]

4—1—57ರಿಂದ ಅಪೋಘ [illegible]

ಪ್ರತಿ ದಿನ ಮೂರು ಪ್ರದರ್ಶನಗಳು

ಬ್ಲಾಕ್ ಅಂಡ್ ವೈಟ್ ಮೂವೀಸ್ [illegible]

ಪಾಕೆಟ್ ಮಾರ್

★ ★

ತಾರಾಗಣ - ದೇವ್ ಆನಂದ್ ಗೀತಾ[illegible] ನಾದಿರಾ, ಗೋಪ್ ಮುಂತಾದವರು

ಅಂದವಾದ ಸಂಗೀತದಿಂದಲೂ ಮನಸೆ[illegible] ನೃತ್ಯಗಳಿಂದಲೂ ಹಾಸ್ಯ [illegible] ದೃಶ್ಯಗಳಿಂದಲೂ ಕೂಡಿರುವ ಈ ಚಿ[illegible] ವನ್ನು ನೋಡಲು ಮರೆಯಬೇಡಿ

Central Food Technological Research Institute, My[illegible]

TENDER NOTIFICATION

Sealed tenders are invited from furniture dealer[illegible] making and supplying office furniture for the [illegible] use of the Institute

The detailed specifications and connected draw[illegible] relating to the work could be obtained from the Adm[illegible]trative Officer, Central Food Technological Rese[illegible] Institute V V Mohalla, Mysore, during Office hours payment of a sum of Rs 5 per set The approximate [illegible] of the work is Rs 8,000 and a tender deposit of Rs. 40[illegible] to be paid along with the tender.

The completed tender in duplicate along with the te[illegible] deposit paid in cash or by Bank Draft at the Office o[illegible] Institute, will have to be sent so as to reach the unders[illegible] before 4 P M on Tuesday the 15th January 1957

The tenders received will be opened by the unders[illegible] at his office on the same day at 4-30 P M in the presen[illegible] the tenderers or their representatives who may be pr[illegible] at the time

The final decision regarding the disposal of the te[illegible] rests with the Council of Scientific and Industrial Rese[illegible] New Delhi The Director of the Institute reserve[illegible] right not to accept the lowest or any of the tenders w[illegible] assigning any reason therefor

A W De SO[illegible]

Administrative [illegible]

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರವಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪ್ರತಿಗೆ 3 ಕಾಸು

ಸಂಪುಟ : ೧೫] SADHVI : FRIDAY 4—1—1957 ಮೈಸೂರು : ಶುಕ್ರವಾರ ೪—೧—೧೯೫೭ [ಸಂಚಿಕೆ : ೮೬೦

ಹೊಸ ಜವಳಿಗಳು ಬಂದಿವೆ
ಮೈಸೂರು ಸಿಲ್ಕು, ಧರ್ಮಾವರಂ, ಪೂನಾ, ನಾಗಪುರ, ಆರಣಿ ಸೀರೆಗಳು ಬಂದಿವೆ
M.V. ಭೋಜಯ್ಯ
ಬಿ ಎ ಅಂಡ್ ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು
ಮೈಸೂರು ಫೋನ್ 446

ರಷ್ಯದ ಶಸ್ತ್ರ ಸನ್ಯಾಸ ಯೋಜನೆಗೆ ತ್ರಿರಾಷ್ಟ್ರಗಳ ತಿರಸ್ಕಾರ

ಕಾಂಗ್ರೆಸ್ಸಿನ ಚುನಾವಣಾ ಪ್ರಣಾಳಿಕೆ

ನೆಹರೂರವರಿಂದ ದೇಶೀಯ ಸಮಾಜವಾದದ ಪ್ರತಿಪಾದನೆ

ಲಕ್ಷ್ಮಿಬಾಯಿನಗರ ೪

ಕಾಂಗ್ರೆಸ್ ಅಧಿವೇಶನದ ವಿಷಯನಿಯಾಮಕ ಸಮಿತಿಯಲ್ಲಿ ನೆನ್ನೆ ಪ್ರಧಾನಿ ನೆಹರೂರವರು ಮಹಾ ಚುನಾವಣೆಗೆ ಸಂಬಂಧಿಸಿದಂತೆ ಕಾಂಗ್ರೆಸ್ಸು ಹೊರಡಿಸಲಿರುವ ಕರಡು ಪ್ರಣಾಳಿಕೆಯನ್ನು ಮಂಡಿಸಿದರು. ಕಾರ್ಯಕಾರಿ ಸಮಿತಿಯವರು ಹಲವು ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿದ್ದರು. ಪಂಡಿತ ಪಂತರು ಅನುಮೋದಿಸಿದರು.

ನೆಹರೂರವರು ತಮ್ಮ ಭಾಷಣದಲ್ಲಿ ಕಾಂಗ್ರೆಸ್ಸಿನ ಗುರಿಯು ಭಾರತೀಯ ವಿಧಾನದಲ್ಲಿ ಸಮಾಜವನ್ನು ಸಾಧಿಸುವುದೇ ಆಗಿದೆಯೆಂದೂ, ಅದನ್ನು ಶಾಂತಿಯುತವಾಗಿಯೂ, ಪ್ರಜಾಸತ್ತಾತ್ಮಕವಾಗಿ ನಡೆಸಬೇಕೆಂಬುದೇ ಕಾಂಗ್ರೆಸ್ಸಿನ ಅಪೇಕ್ಷೆಯೆಂದೂ ಹೇಳಿದರು. ಕಮ್ಯೂನಿಸಂ ತತ್ವದಲ್ಲಿ ಪ್ರಜಾಸತ್ತಾತ್ಮಕ ವಿಧಾನವಿರುವುದಿಲ್ಲವೆಂದು ಹೇಳಿ ಹಂಗೆರಿ ಘಟನೆಗಳನ್ನು ಉದಾಹರಿಸಿದರು. ಅಲ್ಲಿ ಕಮ್ಯೂನಿಸ್ಟರ ಸಮಾಜವಾದವು ಹೊರಗಿನಿಂದ ಹೇರಲ್ಪಟ್ಟುದೇ ಅಲ್ಲಿನ ವಿಪ್ಲವಕರ ಘಟನೆಗಳಿಗೆ ಕಾರಣವಾಯಿತೆಂದು ಅಭಿಪ್ರಾಯಪಟ್ಟರು.

ಇಡೀ ವಿಶ್ವವು ಭಾರತದ ಕಡೆ ನೋಡುತ್ತಿರುವುದೆಂದೂ, ಇಲ್ಲಿನ ಪ್ರಗತಿ ಬಗ್ಗೆ ಸ್ನೇಹಿತರು ಪ್ರಶಂಸೆ ಮಾಡುತ್ತಿರುವರೆಂದೂ, ಇತರರು ಅಸೂಯೆಪಡುತ್ತಿರುವರೆಂದೂ, ದೇಶದ ಬಡತನವನ್ನು ತೊಲಗಿಸಲು ಪ್ರತಿಯೊಬ್ಬರೂ ಶ್ರಮಿಸಬೇಕೆಂದೂ ಪ್ರಗತಿಯ ಸಾಧನೆಗೆ ಬೇರೆ ಸಮೀಪದ ದಾರಿಯಿಲ್ಲವೆಂದೂ ಹೇಳಿದರು.

ನೆಹರೂರವರು ತಮ್ಮ ಭಾಷಣದಲ್ಲಿ ಭಾರತೀಯ ಕಮ್ಯೂನಿಸ್ಟರು ಮತ್ತು ಸಮಾಜವಾದಿಗಳು ಕೇವಲ ಸಮಾಜವಾದವನ್ನು ಘೋಷಿಸಿದರೆ ಏನೂ ಫಲ ಸಿಗುವುದಿಲ್ಲವೆಂದೂ, ಭಾರತದಲ್ಲಿ ಸ್ವದೇಶೀಯ ಸಮಾಜವಾದವು ಬೆಳೆಯಬೇಕೆಂದೂ ನುಡಿದರು. ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ಸಿನವರು ಸತ್ಯ ಮಾರ್ಗವನ್ನೇ ಅವಲಂಬಿಸಬೇಕೆಂದು ಹೇಳಿದರು.

ಪಂಡಿತ ನೆಹರೂರವರು ಕವಿ ಮಹಮದ್ ಇಕ್ಬಾಲರ ಸಾರೆ ಜಹಾ ಸೆ ಅಚ್ಛಾ ಹಿಂದೂಸ್ತಾನ್ ಹಮಾರಾ ಎಂಬ ಕವನವನ್ನು ಹಾಡಿದರು.

ಸಂಬಳದ ಹೊಸ ಸ್ಕೇಲುಗಳ ಬಗ್ಗೆ ೧ ವಾರದಲ್ಲಿ ಪ್ರಕಟಣೆ

ಸಂಸ್ಥಾನ ಸರ್ಕಾರದವರು ನೌಕರರಿಗೆ ನೂತನವಾಗಿ ಕೊಡಲಿರುವ ಸಂಬಳದ ಸ್ಕೇಲುಗಳ ಬಗ್ಗೆ ೧ ವಾರದಲ್ಲಿ ಅಧಿಕೃತ ಪ್ರಕಟಣೆಯನ್ನು ಹೊರಡಿಸಲಿರುವರೆಂದು ಗೊತ್ತಾಗಿದೆ. ಹೊಸ ಸ್ಕೇಲುಗಳನ್ನು ಜಾರಿಗೆ ತರುವ ಸಂಬಂಧದಲ್ಲಿ ಅನೇಕ ವಿವರಗಳ ಪರಿಶೀಲನೆ ಮತ್ತು ನಿರ್ಧಾರವು ಅವಶ್ಯಕವಾಗಿ, ಈ ಕಾರಣದಿಂದ ಪ್ರಕಟಣೆ ಹೊರಬೀಳುವುದು ಸ್ವಲ್ಪ ವಿಳಂಬವಾಯಿತೆಂದು ಹೇಳಲಾಗಿದೆ.

ದೇಶದ ಐಕ್ಯತೆಗಾಗಿ ಎಲ್ಲರೂ ಪ್ರಯತ್ನಿಸಬೇಕು

ಕಾಂಗ್ರೆಸ್ ವಿಷಯ ನಿಯಾಮಕ ಸಮಿತಿಯಲ್ಲಿ ಅಧ್ಯಕ್ಷ ಧೇಬರರ ಭಾಷಣ

ಲಕ್ಷ್ಮಿಬಾಯಿನಗರ ೪

ಭಾರತ ರಾಷ್ಟ್ರೀಯ ಮಹಾಸಭೆಯ ೬೨ನೇ ಅಧಿವೇಶನದ ಸಂಬಂಧದ ಕಾರ್ಯಕ್ರಮಗಳು ನೆನ್ನೆ ಇಂದೋರಿನ ಲಕ್ಷ್ಮಿಬಾಯಿನಗರದಲ್ಲಿ ಆರಂಭವಾದುವು.

ಕಾಂಗ್ರೆಸ್ ಅಧ್ಯಕ್ಷ ಧೇಬರ್‌ರವರು ೭೦ ಅಡಿ ಎತ್ತರದ ಸ್ತಂಭದ ಮೇಲೆ ಕಾಂಗ್ರೆಸ್ ಧ್ವಜವನ್ನು ಆರೋಹಣ ಮಾಡಿದರು. ಅವರು ಮಾತನಾಡಿ ಮುಂದೆ ಬರುವ ಮಹಾ ಚುನಾವಣೆಗಳಲ್ಲಿ ಓಟುಗಳಿಸುವುದೇ ಕಾಂಗ್ರೆಸ್ಸಿನ ಧ್ಯೇಯವಲ್ಲವೆಂದೂ, ವಿಶ್ವದ ವಿಚಾರಗಳನ್ನು ಜನತೆಗೆ ಅರಿವು ಮಾಡಿಕೊಡುವುದು ಅದರ ಗುರಿಯೆಂದೂ ತಿಳಿಸಿ, ೭೦ ವರ್ಷಗಳಿಂದಲೂ ಸೇವೆ ಮತ್ತು ತ್ಯಾಗಗಳ ಸಂಕೇತವಾಗಿರುವ ಧ್ವಜವು ಮುಂದೆಯೂ ಸಂಸ್ಥೆಗೆ ಚೇತನವೀಯಲೆಂದು ಹಾರೈಸಿದರು.

ಮಧ್ಯಾಹ್ನ ಅಧಿವೇಶನದ ವಿಷಯ ನಿಯಾಮಕ ಸಮಿತಿ ಸಭೆಯು ಸೇರಿತು. ಅಧ್ಯಕ್ಷರು ಪೀಠಿಕಾ ಭಾಷಣ ಮಾಡಿ ಕಾಂಗ್ರೆಸ್ಸಿನ ಚುನಾವಣಾ ಘೋಷಣೆಯೇ ಅಧಿವೇಶನವು ಪರಿಶೀಲಿಸುವ ಮುಖ್ಯ ವಿಷಯವಾಗಿರುವುದೆಂದು ತಿಳಿಸಿದರು. ಕಳೆದ ವರ್ಷ ಸಂಸ್ಥಾನ ಪುನರ್ವಿಂಗಡಣೆ ಮತ್ತು ದ್ವಿತೀಯ ಪಂಚವಾರ್ಷಿಕ ಯೋಜನೆಯಂತಹ ಮುಖ್ಯ ಘಟನೆಗಳು ಆದುವೆಂದು ಅವರು ಹೇಳಿ, ದೇಶದಲ್ಲಿ ಐಕ್ಯತೆಯು ಮೂಡಬೇಕೆಂದು ತಿಳಿಸಿದರು. ನೆಹರೂರವರ ನಾಯಕತ್ವದಲ್ಲಿ ಭಾರತವು ವಿಶ್ವ ಶಾಂತಿಗಾಗಿ ದುಡಿದು ಖ್ಯಾತಿ ಪಡೆದಿರುವುದೆಂದು ಸೂಚಿಸಿದರು.

ಗುಜರಾತ್ ಕ್ರಾಂತಿ ಉತ್ಸವಕ್ಕೆ ಸಂಬಂಧಿಸಿದ ಮತ್ತು ರವಿಶಂಕರ ಶುಕ್ಲ ಮುಂತಾದ ನಾಯಕರ ನಿಧನಕ್ಕಾಗಿ ಸಂತಾಪ ಸೂಚನೆ ನಿರ್ಣಯಗಳನ್ನು ಅಧ್ಯಕ್ಷರು ಮಂಡಿಸಿ, ಅವು ಅಂಗೀಕರಿಸಲ್ಪಟ್ಟುವು.

ಎಸ್ ಕೆ ಪಾಟೀಲರು ಕಾಂಗ್ರೆಸ್ಸಿನ ಸಹಕಾರ ಕಾರ್ಯವೆಲ್ಲಿನ ಗುರಿಗೆ ಸಮಾಜವಾದಿ ಎಂಬ ಪದವನ್ನು ಸೇರಿಸುವ ನಿರ್ಣಯವನ್ನು ಸೂಚಿಸಿದರು. ಅದು ಅಂಗೀಕಾರ ಪಡೆಯಿತು.

ಸರ್ಕಾರಿ ಸಾಬೂನು ಕಾರ್ಖಾನೆ ಕೆಲಸಗಾರರಿಂದ ಮುಷ್ಕರದ ನಿರ್ಧಾರ

ಬೆಂಗಳೂರಿನ ಸರ್ಕಾರಿ ಸಾಬೂನು ಕಾರ್ಖಾನೆಯಲ್ಲಿರುವ ಕಾರ್ಮಿಕರು ಮುಷ್ಕರ ಹೂಡಲು ಸರ್ವಾನುಮತದಿಂದ ನಿರ್ಧರಿಸಿರುತ್ತಾರೆ. ಸರ್ಕಾರಿ ಕಾರ್ಖಾನೆಗಳಲ್ಲಿರುವ ನೌಕರರಿಗೆ ತಾತ್ಕಾಲಿಕವಾಗಿ ದೊರೆಯುತ್ತಿದ್ದ ಶೇಕಡ ೧೦ರ ವಿಶೇಷ ಸಂಬಳವನ್ನು ತಪ್ಪಿಸಿರುವುದೇ ಇದಕ್ಕೆ ಕಾರಣ. ಈ ಬಗ್ಗೆ ಕಳೆದ ೩೦ನೇ ತಾರೀಖು ಮತದಾನ ತೆಗೆದುಕೊಂಡು, ಕಾರ್ಖಾನೆಯ ೧೩೦ ಮಂದಿ ಕಾರ್ಮಿಕರೂ ಮುಷ್ಕರ ನಡೆಸುವುದಕ್ಕೆ ಸಮ್ಮತಿ ಕೊಟ್ಟಿರುತ್ತಾರೆ.

ವಿಶ್ವ ಶಾಂತಿ ಸಾಧನೆಗಾಗಿ ಪಂಚಶೀಲದ ಪಾಲನೆ ಅಗತ್ಯ

ಮಿಲಿಟರಿ ಒಪ್ಪಂದಗಳ ರದ್ದಿಗೆ ಕಾಂಗ್ರೆಸ್ ಸಮಿತಿ ಕರೆ

ಕಾಂಗ್ರೆಸ್ ಅಧಿವೇಶನದಲ್ಲಿ ಮಂಡಿಸುವ ಸಲುವಾಗಿ ಕೇಂದ್ರಕಾರಿ ಸಮಿತಿಯು ಅಂಗೀಕರಿಸಿರುವ ವಿದೇಶಾಂಗ ನೀತಿಯ ನಿರ್ಣಯದ ಪ್ರಕಾರ ಅಂತರ ರಾಷ್ಟ್ರೀಯ ಬಿಕ್ಕಟ್ಟಿನ ಪರಿಹಾರಕ್ಕೆ ಹೊಸ ನೀತಿ ಮತ್ತು ಧೈರ್ಯಯುತ ಮಾರ್ಗಾವಲಂಬನೆಯು ಅಗತ್ಯವೆಂದು ಸೂಚಿಸಲಾಗಿದೆ. ಶಸ್ತ್ರಾಸ್ತ್ರಗಳ ಬಲವನ್ನು ನಂಬಬಾರದೆಂದೂ, ಭಯ ಮತ್ತು ಸಂಶಯಗಳಿಗೆ ಎಡೆಮಾಡಿರುವ ಮಿಲಿಟರಿ ಕೂಟಗಳನ್ನು ರದ್ದು ಮಾಡಬೇಕೆಂದೂ ತಿಳಿಸಲಾಗಿದೆ. ಶಾಂತಿ ಸಾಧನೆಗಾಗಿ ಪಂಚಶೀಲ ತತ್ವಗಳ ಪಾಲನೆ ಅಗತ್ಯವೆಂದು ಸೂಚಿಸಿ, ಭಾರತದ ನೀತಿಯು ಎಲ್ಲ ರಾಷ್ಟ್ರಗಳೊಡನೆ ಸ್ನೇಹ ಮತ್ತು ನಿರ್ಲಿಪ್ತ ಮನೋಭಾವದಿಂದೊಡಗೂಡಿದೆಯೆಂದು ನಿರ್ಣಯವು ತಿಳಿಸಿದೆ. ನೆಹರೂರವರು ಈಜಿಪ್ಟ್ ಮತ್ತು ಹಂಗೆರಿ ಬಗ್ಗೆ ಹೊಂದಿರುವ ನೀತಿಯನ್ನು ಅನುಮೋದಿಸಲಾಗಿದೆ.

ತಿರುವನಂತಪುರದಲ್ಲಿ ಪೋಲೀಸರ ಲಾಠಿ ಪ್ರಹಾರ

ತಿರುವನಂತಪುರದಲ್ಲಿ ಹೈಸ್ಕೂಲು ವಿದ್ಯಾರ್ಥಿಗಳ ಚಳುವಳಿಯು ನೆನ್ನೆ ಹಿಂಸಾತ್ಮಕವಾಗಿ ಪರಿಣಮಿಸಿದುದರಿಂದ ಅಲ್ಲಿ ೧೫ ದಿನಗಳ ಕಾಲ ಪ್ರತಿಬಂಧಕಾಜ್ಞೆಯನ್ನು ವಿಧಿಸಿ, ಸಭೆ ನಡೆಸುವುದನ್ನು ನಿಷೇಧಿಸಲಾಗಿದೆ. ಸಂತೆ ಪ್ರದೇಶದಲ್ಲಿ ಸಭೆಯು ಜನರನ್ನು ಚದುರಿಸಲೆತ್ನಿಸಿದಾಗ ಕಲ್ಲುಗಳನ್ನು ಬೀರಲಾಯಿತೆಂದೂ, ಪೋಲೀಸರು ಅಶ್ರುವಾಯು ಪ್ರಯೋಗ ಮಾಡಿದರೆಂದೂ ವರದಿಯಾಗಿದೆ. ಬೆಳಿಗ್ಗೆ ಅಲ್ಲಿನ ಸರ್ಕಾರಿ ಭವನದ ಮುಂದೆ ಜನರ ಗುಂಪು ಸೇರಿ ಕಲ್ಲುಗಳನ್ನು ಬೀರಿದಾಗ ಪೋಲೀಸರು ಲಾಠಿ ಪ್ರಹಾರ ಮಾಡಿದರು. ಒಬ್ಬ ಸಬ್ ಇನ್ಸ್‌ಪೆಕ್ಟರ್ ಮತ್ತು ೧೫ ಮಂದಿ ಪೋಲೀಸರು ಮತ್ತು ೧೦ ಜನರಿಗೆ ಕಲ್ಲು ಮತ್ತು ಲಾಠಿ ಪೆಟ್ಟಿನಿಂದ ಗಾಯವಾಗಿದೆ. ೨೩ ಜನ ಸ್ವಯಂಸೇವಕರನ್ನೂ, ಇತರ ೧೩ ಮಂದಿಯನ್ನೂ ಬಂಧಿಸಲಾಗಿದೆ.

ಮಧ್ಯ ಪ್ರದೇಶದ ಮುಖ್ಯ ಮಂತ್ರಿ ಸ್ಥಾನಕ್ಕೆ ಕಟ್ಜು

ಭಾರತದ ರಕ್ಷಣಾ ಮಂತ್ರಿಯಾಗಿರುವ ಕೆ ಎನ್ ಕಟ್ಜುರವರು ಮಧ್ಯ ಪ್ರದೇಶದ ಮುಖ್ಯ ಮಂತ್ರಿಯಾಗಲಿರುವರೆಂದು ಹೇಳಲಾಗಿದೆ. ರವಿಶಂಕರ ಶುಕ್ಲರವರ ನಿಧನದ ಪರಿಣಾಮವಾಗಿ ಸ್ಥಾನವು ತೆರವಾಗಿ, ಈಗ ಮಾಂಡಲೋಯ್‌ರವರು ತಾತ್ಕಾಲಿಕ ಮುಖ್ಯ ಮಂತ್ರಿಯಾಗಿರುವರು.

೦ಮಹಬೂಬ್‌ನಗರದ ಬಳಿ ಕಳೆದ ವರ್ಷ ಆದ ರೈಲು ದುರಂತಕ್ಕೆ ಚೀಫ್ ಇಂಜನಿಯರ್ ಡೆಪ್ಯುಟಿ ಚೀಫ್ ಮತ್ತು ಡಿವಿಜನ್ ಇಂಜನಿಯರುಗಳು ಕಾರಣರೆಂದು ತನಿಖೆ ನಡೆಸಿದ ಜಸ್ಟಿಸ್ ಎಸ್ ಬಿ ದೇಸಾಯಿಯವರು ಅಭಿಪ್ರಾಯ ಸೂಚಿಸಿರುತ್ತಾರೆ.

ವಿಶ್ವ ಸಂಸ್ಥೆಯ ಮೂಲಕ ಶಸ್ತ್ರ ಸನ್ಯಾಸಕ್ಕೆ ತ್ರಿರಾಷ್ಟ್ರಗಳ ಕರೆ

ರಷ್ಯಾ ಸಲಹೆಗೆ ತಿರಸ್ಕಾರ

ವಿಶ್ವ ಸಂಸ್ಥೆಯ ಎಲ್ಲೆಕಟ್ಟಿನೊಳಗೆ ಶಸ್ತ್ರ ಸನ್ಯಾಸ ಸಮಸ್ಯೆಯನ್ನು ಬಗೆಹರಿಸಲು ರಷ್ಯವು ಪ್ರಯತ್ನಿಸಬೇಕೆಂದು ಬ್ರಿಟನ್, ಅಮೆರಿಕ ಮತ್ತು ಫ್ರಾನ್ಸುಗಳು ಸೂಚಿಸಿವೆ. ಅದಕ್ಕಾಗಿ ಪಂಚ ಮಹಾ ರಾಷ್ಟ್ರಗಳ ಸಮ್ಮೇಳನದ ಅಗತ್ಯವಿಲ್ಲವೆಂದೂ ಅವು ತಿಳಿಸಿವೆ. ಈ ಬಗ್ಗೆ ಉನ್ನತ ದರ್ಜೆ ನಾಯಕರ ಸಭೆಗೆ ಇದು ಸಮಯವಲ್ಲವೆಂದೂ ಅಭಿಪ್ರಾಯಪಡಲಾಗಿದೆ. ರಷ್ಯವು ಅಗ್ರ ನಾಯಕರ ಸಭೆಗೆ ಸೂಚಿಸಿದ್ದಿತು.

ನಗರ ಮತ್ತು ಜಿಲ್ಲೆಯಲ್ಲಿ ಕಾಂಗ್ರೆಸ್ ಉಮೇದುವಾರರು

ಮಹಾ ಚುನಾವಣೆ ಸಂಬಂಧವಾಗಿ ಕಾಂಗ್ರೆಸ್ಸಿನ ಪರವಾಗಿ ಮೈಸೂರು ನಗರ ಮತ್ತು ಜಿಲ್ಲೆಯಿಂದ ಕೆಳಗೆ ಕಂಡವರನ್ನು ಪ್ರಾದೇಶಿಕ ಕಾಂಗ್ರೆಸ್ ಚುನಾವಣಾ ಸಮಿತಿಯು ಉಮೇದುವಾರರಾಗಿ ಆರಿಸಿರುತ್ತದಾಗಿ ತಿಳಿದುಬಂದಿದೆ :—

ನಗರ ದಕ್ಷಿಣ ಶ್ರೀ ಕೆ ಎಸ್ ಸೂರ್ಯನಾರಾಯಣರಾವ್, ಉತ್ತರ: ಜನಾಬ್ ಮಹಮದ್ ಖಲೀಲುಲ್ಲಾ, ತಾಲ್ಲೂಕು ಶ್ರೀ ಕೆ ಪುಟ್ಟಸ್ವಾಮಿ, ನಂಜನಗೂಡು ಶ್ರೀ ಪಿ ಮಹದೇವಯ್ಯ, ಬಳಿಗೆರೆ ಶ್ರೀ ಪ್ರಭುಸ್ವಾಮಿ, ಚಾಮರಾಜನಗರ ರಿಸರ್ವ್ ಶ್ರೀ ಶೇರಕೆ ಮಾದಯ್ಯ, ಹುಣಸೂರು ಹೆಗ್ಗಡದೇವನಕೋಟೆ: ಶ್ರೀ ಡಿ ದೇವರಾಜ ಅರಸ್ ಮತ್ತು ಎನ್ ರಾಚಯ್ಯ, ಗುಂಡ್ಲುಪೇಟೆ ಶ್ರೀ ಹೆಚ್ ಕೆ ಶಿವರುದ್ರಪ್ಪ, ಟಿ ನರಸೀಪುರ ಶ್ರೀ ಮರಿಗೌಡ ಅಥವಾ ಟಿ ಪಿ ಬೋರಯ್ಯ ಮತ್ತು ಶ್ರೀಮತಿ ಕೆಂಪಮ್ಮ (ರಿಸರ್ವ್), ಕೊಳ್ಳೇಗಾಲ ಶ್ರೀ ವೆಂಕಟರಮಣೇಗೌಡ, ಕೃಷ್ಣರಾಜನಗರ ಶ್ರೀ ಹೆಚ್ ಎಂ ಚನ್ನಬಸಪ್ಪ.

ಉಮೇದುವಾರರ ಆಯ್ಕೆ ಬಗ್ಗೆ ಅಸಮಾಧಾನ ಸೂಚಿಸಲು ೬ರಂದು ಕಾರ್ಯಕರ್ತರ ಸಭೆ

ಮಹಾ ಚುನಾವಣೆಗೆ ಕಾಂಗ್ರೆಸ್ ಉಮೇದುವಾರರುಗಳನ್ನು ಆರಿಸಿರುವ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸಲು ಶನಿವಾರ ಮಧ್ಯಾಹ್ನ ೧ ಘಂಟೆಗೆ ಬೆಂಗಳೂರು ಕಾರ್ಪೊರೇಷನ್ ಕಛೇರಿ ಬಳಿ ಇರುವ ದೇವಾಂಗ ಸಂಘದ ಕಟ್ಟಡದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯು ಶ್ರೀ ಪಿ ಆರ್ ರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದೆಂದು ತಿಳಿದುಬಂದಿದೆ.

ಫೋಟೋಗ್ರಾಫಿಕ್ ಸ್ಟುಡಿಯೋವಿನಲ್ಲಿ ಬೆಂಕಿ ಆಕಸ್ಮಿಕ

ನಗರದ ಶ್ರೀರಾಮಪೇಟೆಯಲ್ಲಿರುವ ಶ್ರೀ ವಸಂತ ಸ್ಟೂಡಿಯೋವಿನಲ್ಲಿ ನೆನ್ನೆ ಮಧ್ಯಾಹ್ನ ವಿದ್ಯುಚ್ಛಕ್ತಿ ಷಾರ್ಟ್‌ಸರ್ಕ್ಯೂಟಿನಿಂದ ಬೆಂಕಿಯುಂಟಾಗಿ ಸುಮಾರು ೧೫೦೦ ರೂ ಬೆಲೆಯ ಸಾಮಾನುಗಳು ನಷ್ಟವಾದುವು. ಅಗ್ನಿಶಾಮಕ ದಳದವರು ಸಕಾಲದಲ್ಲಿ ಹೋಗಿ ಬೆಂಕಿಯನ್ನು ಹತೋಟಿಗೆ ತಂದರು.